ISSN:3048-7137

# ಆರಯ್

ಕನ್ನಡ ಇಮ್ಮುಖ ಕುರುಡೋದು (Double Blind)
ಮತ್ತು ದಟ್ಟೋದು (Peer Review)
ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೩

ಜುಲೈ-ಸೆಪ್ಟೆಂಬರ್ ೨೦೨೫

Kannada Online Double Blind Peer-Review Quarterly Research Journal

Volume-2, Number-3 July-September 2025

ಕಟ್ಟುಗ

ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ
ಮಸ್ಕಿ

**ಆರಯ್**
ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು
(Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ
ಸಂಪುಟ–೨, ಸಂಚಿಕೆ–೩, ಜುಲೈ–ಸೆಪ್ಟೆಂಬರ್ ೨೦೨೫
ISSN : 3048-7137

**ARAY**
Kannada Online Double Blind Peer-Review Quarterly Research Journal
Volume-2, Number-3, July-September 2025
https://aray.in/

ಪುಟ/Pages : 130
ಹಕ್ಕು/@: ಪ್ರಕಾಶಕರು
ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು
**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೮೬೪ ೦೭೭೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಜಾನಪದ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ<br>**ಗಂಗಾಧರ ದೈವಜ್ಞ** | **4-25** |
| ಕೇಳಿಕೆ ರಂಗಭೂಮಿ ಹಿನ್ನೆಲೆಯಲ್ಲಿ ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ<br>**ವೇಮಗಲ್ ನಾರಾಯಣಸ್ವಾಮಿ** | **26-49** |
| ಬಯಲಾಟದಲ್ಲಿ ಬಹು ಭಾಷಾ ಬಳಕೆ<br>**ಹೆಚ್.ಡಿ.ನರಸೇಗೌಡ** | **50-67** |
| ಬಯಲಾಟ ಕಲಾವಿದ ಜಡೆ ದೊಡ್ಡಬಸಪ್ಪ<br>**ಗಾದೆಪ್ಪ** | **68-78** |
| ಬಯಲಾಟಗಳಲ್ಲಿ ದ್ವಿ ಭಾಷಿಕತೆ<br>**ಇಮಾಮ್‌ಸಾಬ ಹಡಗಲಿ** | **79-87** |
| ಕನ್ನಡ ಬಯಲಾಟ ಪರಿಸರ ಮತ್ತು ಪ್ರೇರಣೆ<br>**ಹುಲುಗಪ್ಪ ಎನ್.ಎಚ್** | **88-99** |
| ತೊಗಲು ಗೊಂಬೆ ಆಟ<br>**ರುದ್ರಮುನಿ ಹೀರೆಮಠ** | **100-117** |
| ಕೋಲಾರ ಜಿಲ್ಲೆಯ ಕೇಳಿಕೆಗಳ ವೈಶಿಷ್ಟ್ಯತೆ<br>**ನಟರಾಜ ಬಿ.ಎನ್.** | **118-130** |

ISSN : 3048-7137

# ತೊಗಲು ಗೊಂಬೆ ಆಟ

ರುದ್ರಮುನಿ ಹೀರೆಮಠ

**ಸೂಚಕ ಪದಗಳು**

ತೊಗಲು ಗೊಂಬೆ, ಜನಪದ ಕಲೆ, ಜನಪದ ರಂಗಭೂಮಿ, ಆರಾಧನಾ ಕಲೆ

**ಸಾರಲೇಖ**: ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಪ್ರಸಿದ್ಧಿ ಹೊಂದಿರುವ ತೊಗಲು ಗೊಂಬೆ ಆಟ ಅಥವಾ ನೆರಳು ಬೆಳಕಿನ ಆಟ ಜನಪದ ಕಲೆಯ ಒಂದು ವೈಶಿಷ್ಟ್ಯಪೂರ್ಣ ರೂಪವಾಗಿದೆ. ಈ ಕಲೆಯು ಆರಾಧನೆ, ಆಚರಣೆ, ಸಂಪ್ರದಾಯ ಮತ್ತು ಪ್ರದರ್ಶನಗಳ ಮೂಲಕ ಸಾಂಸ್ಕೃತಿಕ, ಧಾರ್ಮಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಪ್ರತಿಬಿಂಬಿಸುತ್ತದೆ. ತೊಗಲು ಗೊಂಬೆಗಳ ರಚನೆ, ಕಲೆಗಾರಿಕೆ, ಬಣ್ಣ ಸಂಯೋಜನೆ, ಸಾಹಿತ್ಯ ಸಂಭಾಷಣೆ, ಸಂಗೀತ, ನೃತ್ಯ ಮತ್ತು ರಂಗ ಪರಿಕರಗಳ ಬಳಕೆ ಈ ಆಟದ ವೈಶಿಷ್ಟ್ಯವನ್ನು ಹೆಚ್ಚಿಸುತ್ತದೆ. ಇದು ನೃತ್ಯ, ನಾಟಕ, ಆರಾಧನಾ, ಮನರಂಜನಾ, ವೃತ್ತಿಪರ ಮತ್ತು ವಾದ್ಯಾಧಾರಿತ ಕಲೆಗಳ ಸಂಗಮವನ್ನೂ ಪ್ರತಿಪಾದಿಸುತ್ತದೆ. ತೊಗಲು ಗೊಂಬೆ ಆಟವು ವಿಕಸಿತವಾಗಿರುವ ಜಾನಪದ ಕಲೆಯ ಮೂಲಕ ಗಡಿಬಂಧನ, ಜನಾಂಗೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಗಳ ಸಾಂದರ್ಭಿಕ ಚಲನೆಯನ್ನು ಪ್ರತಿಬಿಂಬಿಸುತ್ತದೆ.

ಪ್ರತಿಯೊಂದು ಜನಪದ ಕಲೆಯ ಮೂಲವನ್ನು ಶೋಧಿಸುತ್ತಾ ಹೋದಾಗ ಅಲ್ಲಿ ಅನೇಕ ದೇಶಿಯ ವಿಚಾರಗಳನ್ನು ಹಾಗೂ ಸ್ಥಳೀಯ ಮಟ್ಟದ ಚಿಂತನೆಗಳನ್ನು ನೋಡಿದಾಗ ಆರಾಧನೆ, ಆಚರಣೆ, ಪ್ರದರ್ಶನಗಳ ಮೂಲಕ ಸಂಸ್ಕೃತಿಯೊಂದರ ದರ್ಶನ ಮಾಡಿಸುತ್ತವೆ. ಕೆಲವೊಮ್ಮೆ ಸಾಂಸ್ಕೃತಿಕ ಹಿಂಬೀಳಿಕೆಯನ್ನು, ಸಾಂಸ್ಕೃತಿಕ ಸಂಘರ್ಷವನ್ನು ತಲುಪುತ್ತವೆ. ಬಹುರಾಷ್ಟ್ರೀಯ ಸಂಸ್ಕೃತಿಯ ದಾಳಿಯಿಂದಲೂ ನಮ್ಮ ಜಾನಪದ ಕನ್ಯೆ ನೆಲ ಕಲುಷಿತಗೊಂಡು ವ್ಯವಹಾರಿಕವೂ ಎನಿಸಿದೆ. ಜಾಗತೀಕರಣದ ಹಿಂಸೆಯೊಂದಿಗೆ ತನ್ನ ತನವನ್ನು ಕಳೆದುಕೊಂಡು ಆಮದು ರಫ್ತುಗಳಂತೆ ಸರಕಾಗಿ ಬಾಡಿಗೆಯನ್ನು ಪಡೆದು ಅಸ್ತಿತ್ವ ಕಳೆದುಕೊಳ್ಳುವಂತೆ ಭಾಸವಾಗುತ್ತದೆ. ಧರ್ಮ, ದೇವರು, ಆರಾಧನೆ, ಪಂಥ, ಪಂಗಡ ಮತ್ತು ಸಾಮಾಜಿಕ ಶ್ರೇಣೀಕರಣಗಳ ಸಂಕೀರ್ಣ ಬದುಕು ನಮ್ಮ ಜಾನಪದ ಕಲಾ ಜಗತ್ತಿನ ಮೇಲೆ ತೀವ್ರವಾದ ಪರಿಣಾಮವನ್ನು ಬೀರಿದೆ. ಈ ರೀತಿ ನಮ್ಮ ಸಾಂಸ್ಕೃತಿಕ ಬದುಕಿಗೂ ಜನಪದ ಕಲೆಗಳ ಅಸ್ತಿತ್ವಕ್ಕೂ ಅವಿನಾಭಾವ ನಂಟಿರುವುದು ಕಂಡುಬರುತ್ತದೆ. ನಮ್ಮ ಸಾಂಸ್ಕೃತಿಕ ಇತಿಹಾಸದ ವಿವಿಧ ಘಟ್ಟಗಳಲ್ಲಿ ನಾನಾ ಕಾರಣಗಳಿಂದ ಹುಟ್ಟಿಕೊಂಡ ಜಾನಪದ ಕಲೆಗಳಿಗೆ ಕರ್ನಾಟಕ ತಾಯ್ನೆಲವೆನಿಸಿಕೊಂಡಿದೆ. ಈ ಕರ್ನಾಟಕದ ಭೌಗೋಳಿಕ ಸೀಮೆಯು ವಿವಿಧ ಹಿನ್ನೆಲೆಯುಳ್ಳ ಹಲವು ವೈಶಿಷ್ಟ್ಯತೆಗಳನ್ನು ಮೈಗೂಡಿಸಿಕೊಂಡಿದ್ದು ವೈವಿಧ್ಯಮಯ ಜಾನಪದ ಕಲೆ, ಸಾಹಿತ್ಯ, ಸಂಸ್ಕೃತಿ ತನ್ನ ಗಟ್ಟಿತನದಿಂದ ಮೆರೆದರು ಇಂದು ವಿವಿಧ ವರ್ಗ, ವರ್ಣ, ಧರ್ಮ ಜನಾಂಗದ ಪರಂಪರೆಯಲ್ಲಿ ಉಳಿದು-ಬೆಳೆದು ನಶಿಸಿದ ಅನುಕರಣೆಯಾದ ವಲಸೆ ಹೋಗುವ ಮೌಖಿಕ ಮತ್ತು ಪ್ರದರ್ಶನದ ಮಾರ್ಪಾಡಿನೊಂದಿಗೆ ಜೀವಂತ ಇರುವ ಜನಪದ ಕಲೆಗಳು ಅಪರೂಪ ಆಗುತ್ತಿವೆ. ಎಷ್ಟೋ ಕಲೆಗಳು ಇಂದು ಅಳಿವಿನಂಚಿನಲ್ಲಿವೆ.

ವಿಶಿಷ್ಟ ಸಂದರ್ಭದಲ್ಲಿ ವಿವಿಧ ಜನಾಂಗಗಳಲ್ಲಿ ಕಂಡುಬರುವ ಜನಪದ ಪ್ರದರ್ಶನ ಕಲೆಗಳು ಆಧುನೀಕರಣ, ಜಾಗತೀಕರಣ, ಖಾಸಗೀಕರಣ, ನಗರೀಕರಣಗಳ ದಾಳಿಗಳಿಂದ ತತ್ತರಿಸಿಕೊಂಡು ಬದುಕುಳಿಯಲು ಪ್ರಯತ್ನಿಸುತ್ತಿವೆ. ಅನುಕರಣೆ, ಆರಾಧನೆಗಳ ಮೂಲಕ ಬದುಕುಳಿಯುತ್ತಿರುವ ಅನೇಕ ಜನಪದ ಕಲೆಗಳನ್ನು ನಾವು ಆರಾಧನ ಕಲೆ, ಧರ್ಮಪ್ರಸಾರದ ಕಲೆ, ವೃತ್ತಿ ಗಾಯಕ ಕಲೆ, ಕೃಷಿ ಸಂಬಂಧಿತ ಕಲೆ, ನೀತಿ ರೂಪಕ ಕಲೆ, ಶುದ್ಧ ಮನರಂಜನಾ ಕಲೆ, ರಂಗಭೂಮಿ ಕಲೆ, ನಿಸರ್ಗದ ಕಲೆ, ಗಿರಿಜನರ ಕಲೆ, ಕುಣಿತ ಪ್ರಧಾನ ಕಲೆ, ನೃತ್ಯ ಪ್ರಧಾನ ಕಲೆ, ಸಂಗೀತ ಆರಾಧನಾ ಕಲೆ, ವಾದ್ಯ ಆಧಾರಿತ ಕಲೆ, ಮಲೆನಾಡಿನ ಕಲೆ, ಕರಾವಳಿಯ ಕಲೆ, ಬಯಲು ಸೀಮೆಯ ಕಲೆ, ಪ್ರದರ್ಶನ ಕಲೆ,

ISSN : 3048-7137

ಅಲೆಮಾರಿಗಳ ಕಲೆ, ದೈವ ಆರಾಧನಾ ಕಲೆ, ಅಂಗಾಂಗ ಅಭಿನಯದ ಕಲೆ, ನೃತ್ಯ ಕಲೆ ಮೊದಲಾಗಿ ನೋಡಿದಾಗ ಒಂದು ನಾಡಿನ ಸಾಂಸ್ಕೃತಿಕ ಸಂಘರ್ಷವನ್ನೇ ಕಲೆಗಳ ಏಳುಬೀಳುಗಳ ಸ್ಥಿತಿಯನ್ನೇ ನೋಡಬೇಕಾದೀತು. ಅಲೆಮಾರಿಗಳ ಕಲೆಗಳಂತೂ ಯಾರ ಸುಪರ್ದಿಗೂ ಸಿಗದೇ ಯಾವ ಚೌಕಟ್ಟಿಗೂ ಒಳಗಾಗದೆ ನಿರಂತರ ಚಲನಶೀಲತೆಯನ್ನು ಹೊಂದಿದ್ದು ತನ್ನ ತನವನ್ನು ಮೈಗೂಡಿಸಿಕೊಂಡು ದೇಸೀಯತೆ ಮೆರೆದಿವೆ. ಯಾವುದೋ ಒಂದು ವಿಶಿಷ್ಟ ಸಂದರ್ಭದಲ್ಲಿನ ಪ್ರದರ್ಶನಗಳನ್ನು ನಾವು ಕಲೆಗಳೆಂದು ಕರೆಯುತ್ತೇವೆ. ಅನೇಕ ಸಂದರ್ಭಗಳಲ್ಲಿ ಅಭಿನಯಾತ್ಮಕ ಪ್ರದರ್ಶನ ಒಂದು ಸಂಪ್ರದಾಯ ಅಥವಾ ಜನಾಂಗೀಯ ಆರಾಧನಾ ಚೌಕಟ್ಟಿನಲ್ಲಿ ನೆಲೆಗೊಳ್ಳುತ್ತವೆ.

ಜನಪದ ರಂಗಭೂಮಿಯು ಆರಾಧನೆಗಳ, ಆಚರಣೆಗಳ, ಸಂಪ್ರದಾಯಗಳ ಮೂಲಕವೇ ವಿಕಸನಗೊಂಡ ಕಲೆಗಳ ಸಂಗಮ ಕ್ಷೇತ್ರವಾಗಿದೆ. ಪ್ರತಿಯೊಂದು ಕಲೆಯ ಹಿನ್ನೆಲೆಯು ಸಾಂಸ್ಕೃತಿಕ ಸಂಗತಿಗಳ, ಜನಾಂಗೀಯ ಆರಾಧನಾ ವೃತ್ತಿಪರವಾದ ಹಿನ್ನೆಲೆಯನ್ನು ಹೊಂದಿರುತ್ತವೆ. ಯಾವ ಜನವರ್ಗ ಯಾವ ಸಂದರ್ಭದಲ್ಲಿ ಆರಾಧಿಸುತ್ತಾರೆ, ಪ್ರದರ್ಶಿಸುತ್ತಾರೆ ಎನ್ನುವ ಸಾಂಸ್ಕೃತಿಕ ಹುಡುಕಾಟವನ್ನು ಮಾಡಬೇಕಾಗುತ್ತದೆ. ಕರಾವಳಿ ಮತ್ತು ಮಲೆನಾಡು ಪ್ರದೇಶಗಳನ್ನು ಹೊರತುಪಡಿಸಿ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಆಡಿಸುವ, ಪ್ರದರ್ಶಿಸುವ 'ತೊಗಲು ಗೊಂಬೆಗಳ ಆಟ' ಅಥವಾ 'ನೆರಳು ಬೆಳಕಿನ ಆಟ'ವನ್ನು ಗಮನಿಸಿದಾಗ ಇದರಲ್ಲಿ ಹತ್ತು ಹಲವು ವಿಶೇಷ ಕಲೆಗಳು ಸಂಗಮಗೊಂಡಿರುವುದು ಕಂಡುಬರುತ್ತದೆ. ಅಂದರೆ ಚರ್ಮಗಳ ಮೂಲಕ ತೊಗಲು ಗೊಂಬೆಗಳ ರಚನೆ ಹಾಗೂ ಅವುಗಳನ್ನು ವಿಶಿಷ್ಟ ರೀತಿಯಲ್ಲಿ ಕತ್ತರಿಸುವ ಕಲೆಗಾರಿಕೆ, ವಿವಿಧ ಬಣ್ಣಗಳಿಂದ ಅಂತಹ ಗೊಂಬೆಗಳನ್ನು ಅಣಿಗೊಳಿಸುವುದು, ವಿವಿಧ ರೀತಿಯ ಸಾಹಿತ್ಯ ಸಂಭಾಷಣೆ ನಡೆಸುವುದು, ವಿವಿಧ ರಂಗ ಪರಿಕರಗಳನ್ನು ಬಳಸುವ ಸಂಗೀತ ಕಲೆ, ಸಂಭಾಷಣ ಕಲೆ, ಉತ್ತಮವಾದ ಹಿನ್ನೆಲೆ ಹಾಗೂ ಮೇಳದ ಸಮಾಗಮವನ್ನು ಇಲ್ಲಿ ಕಾಣುತ್ತೇವೆ.

"ಇಂತಹ ತೊಗಲು ಗೊಂಬೆಗಳ ನೃತ್ಯ ಪ್ರದರ್ಶನಗಳ ಆಟವನ್ನು ನೋಡಿದಾಗ ಈ ಗೊಂಬೆಗಳ ಮೂಲಸ್ಥಳ ಹಾಗೂ ತಯಾರಿಸುವ ಜನಾಂಗವನ್ನು 'ಕಿಳ್ಳೆಕ್ಯಾತ' ಎಂದು ಕರೆಯುತ್ತಾರೆ. ಈ ಜನಾಂಗದ ಕಲೆ ಕುಲಕಸುಬು ವೃತ್ತಿಯು ಆಗಿದ್ದು ಇವರ ಮೂಲವನ್ನು ಮಹಾರಾಷ್ಟ್ರದ ಸತಾರ, ಕರಾಡ, ರತ್ನಗಿರಿ ಮೊದಲಾದ ಜಿಲ್ಲೆಗಳಲ್ಲಿ ನೆಲೆಸಿದ್ದು ಇವರನ್ನು ಚಿತ್ರ ರಾಮರು,

ಪ್ರಾತರು ಅಥವಾ ಗೊಂಬೆ ರಾಮರು ಎಂಬ ಅಲೆಮಾರಿ ಜನಾಂಗದ ವೃತ್ತಿಪರ ಕಲೆ ಇದಾಗಿದೆ. ಈ ಜನಾಂಗಕ್ಕೆ ಕಿಳ್ಳೆಕ್ಯಾತ, ಸಿಳ್ಳೆಕ್ಯಾತ, ಕಟುಬುಕ್ಯಾತ, ಕೋಲುಕ್ಯಾತ, ಅಸ್ತ್ರೀಕ್ಯಾತ, ಕಾಲಿಕ್ಯಾತ, ಬುಂಡೇಕ್ಯಾತ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ." (ಕರ್ನಾಟಕದ ಜಾನಪದ ಕಲೆಗಳ ಕೋಶ ಡಾ ಹಿಚಿ ಬೋರಲಿಂಗಯ್ಯ ಪು. 276)

ಈ ಜನಾಂಗದ ಮೂಲವನ್ನು ರಾಮಾಯಣದ ಕಥೆಯಲ್ಲಿನ ಗುಹನ ವಂಶಸ್ಥರೆಂದು ಹೇಳುತ್ತಾರೆ. ಇವರ ಕುಲಕಸುಬು ತೊಗಲಿನಿಂದ ಗೊಂಬೆಗಳನ್ನು ರಚಿಸಿ ಅವುಗಳ ಪ್ರದರ್ಶನದೊಂದಿಗೆ ಅಲೆಮಾರಿಗಳಾಗಿ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಸಂಚಾರ ಮಾಡುತ್ತಾರೆ. ಪೌರಾಣಿಕ ಕಥೆಯೊಂದರ ಪ್ರಕಾರ ಈ ಕಿಳ್ಳೆಕ್ಯಾತ ಜನಾಂಗವು ಈ ಕಲೆಯನ್ನು ರೂಡಿಸಿಕೊಂಡ ಬಗ್ಗೆ ಈ ದಂತಕಥೆ ಹೇಳುತ್ತಾರೆ. ಅಂದರೆ ಕತ್ತಾರೆ ಕಾಳಾಚಾರಿ ಎಂಬ ಮರಾಠಿ ವ್ಯಕ್ತಿ ವ್ಯವಸಾಯ ಮಾಡುತ್ತಿದ್ದಾಗ ಒಬ್ಬ ಹೆಂಗಸಿನೊಂದಿಗೆ ಗೌಪ್ಯ ಸಂಬಂಧವನ್ನು ಹೊಂದಿದ್ದು, ಅದು ಬಯಲಾದಾಗ ಆ ಹೆಣ್ಣಿಗೆ ಏಳು ಜನ ಮಕ್ಕಳು ಜನಿಸಿದ್ದು ಅವಳನ್ನು ಮನೆಯವರು ಮಕ್ಕಳೊಂದಿಗೆ ಮನೆಯಿಂದ ಹೊರ ಹಾಕಿದರು. ಆಗ ತನ್ನ ಪ್ರೇಯಸಿ ಮತ್ತು ಮಕ್ಕಳನ್ನು ಸ್ವತ ಸಾಕಲಾರದ ಕಾಳಾಚಾರಿ ಅವರಿಗೆ ಚರ್ಮದಿಂದ ಮಾಡಿದ ಗೊಂಬೆಗಳನ್ನು ನೀಡಿ ಊರೂರು ಅಲೆದು ಭಿಕ್ಷೆಬೇಡಿ ತಿನ್ನುವಂತೆ ಮಾಡುತ್ತಾನೆ. ಜೀವನೋಪಾಯಕ್ಕಾಗಿ ಈ ವೃತ್ತಿಮಾಡುವ ಜನಾಂಗವೇ ಕಿಳ್ಳೆಕ್ಯಾತರು. ಇವರಿಗೆ ಶ್ರೀರಾಮನ ಶಾಪವು ಕಾರಣವಾಗಿ ಅಲೆಮಾರಿಗಳಾಗ ಬೇಕಾಯಿತು. ಬೆಳಗಾವಿ, ಬಿಜಾಪುರ ಮೊದಲಾದ ಜಿಲ್ಲೆಗಳಲ್ಲಿ ಕಟಭರೆಂದು ಕರೆಯುವ ಈ ಜನಾಂಗವೇ 'ಕಟುಬು' ಜಾತ ಎನಿಸಿದ್ದಾರೆ. ಹೀಗೆ ಮಹಾರಾಷ್ಟ್ರದಲ್ಲಿ ಕಟ್ ಪುತಲಿ, ಆಂಧ್ರದಲ್ಲಿ ಬೊಮ್ಮಲಾಟ, ತಮಿಳುನಾಡಿನಲ್ಲಿ ಸೂತ್ರದ ಗೊಂಬೆ ಎಂದು ಕರೆಯುವ ಇವರ ಕಲೆ ಎಲ್ಲೆಡೆ ಹಬ್ಬಿದೆ. ಈ ಕಲಾವಿದರು ಮೂಲ ಈಗಾಗಲೇ ಹೇಳಿದಂತೆ ಕೊಲ್ಲಾಪುರ, ಸತಾರ, ರತ್ನಗಿರಿ ಭಾಗದವರಾಗಿದ್ದು ಮರಾಠಿ ಮಿಶ್ರಿತ ಕನ್ನಡದಲ್ಲಿ ಮಾತನಾಡುತ್ತಾರೆ. ಇವರು ಅಲೆಮಾರಿಗಳಾಗಿದ್ದು ತಮ್ಮ ಪ್ರದರ್ಶನದಿಂದ ಜೀವನ ಸಾಗಿಸುತ್ತಾರೆ.

## ಉದ್ದೇಶ

ಪ್ರದರ್ಶನ ಏಕೆ ಎಂದು ಶೋಧಿಸಿದಾಗ ಶ್ರೀರಾಮನ ಆಜ್ಞೆಯನ್ನು ಎಲ್ಲರೂ ಪಾಲಿಸಬೇಕು. ಇವರ ಕಲೆಯ ಪ್ರದರ್ಶನದಿಂದ ಮಾತ್ರ ಶಾಪ ವಿಮೋಚನೆ ಆಗುತ್ತದೆ ಎಂಬ ಸಾಮಾನ್ಯ ನಂಬಿಕೆ ಜನರಲ್ಲಿದೆ. ಆದ್ದರಿಂದ ಜಾತ್ರೆ, ಉತ್ಸವಗಳಲ್ಲಿ ತೊಗಲು ಗೊಂಬೆಗಳ ಆಟ ಪ್ರದರ್ಶಿಸುತ್ತಾರೆ. ಇದರಿಂದ ಮಳೆ ಬೆಳೆ

ISSN : 3048-7137

ಸಮೃದ್ಧಿಯಾಗುತ್ತದೆ ಮತ್ತು ರೈತ ವರ್ಗದ ವ್ಯವಸಾಯ ಆಧಾರಿತ ಕುಟುಂಬಗಳಲ್ಲಿ ದನಗಳಿಗೆ ಚಪ್ಪೆ ರೋಗ ಬರುವುದಿಲ್ಲವೆಂದು ನಂಬುತ್ತಾರೆ. ಕೆಲವು ವೈಯಕ್ತಿಕ ಸಮಾರಂಭಗಳಲ್ಲಿ ವಿವಿಧ ಜನಸಮುದಾಯ ಸೇರಿದಾಗ ಅದರಲ್ಲೂ ವಿಶೇಷವಾಗಿ ಬೀಗರಿಗೆ ಮನರಂಜನೆಗಾಗಿ ಈ ಕಲೆಯನ್ನು ಪ್ರದರ್ಶನ ಮಾಡುತ್ತಾರೆ. ರೈತಾಪಿ ವರ್ಗದವರು ಬಿಡುವಿನ ವೇಳೆಯಲ್ಲಿ ಪ್ರತಿ ಗ್ರಾಮದವರು ಇವರನ್ನು ಆಹ್ವಾನಿಸಿ ಇವರಿಂದ ತೊಗಲುಗೊಂಬೆಯಾಟವನ್ನು ಪದರ್ಶನ ಮಾಡುವಂತೆ ವಿಂತಿಸಿಕೊಳ್ಳುತ್ತಾರೆ. ಅಲ್ಲದೆ ಶ್ರೀರಾಮಚಂದ್ರನ ಆದೇಶವು ಪಾಲನೆಯಾಗಿ ದೈವತ್ವದ ನೆಲೆಯಲ್ಲಿ ತಲುಪುತ್ತಾರೆಂದು ಹೇಳುವರು. ಹೀಗೆ ಧಾರ್ಮಿಕ ಆಚರಣೆಗಳ ಹಿನ್ನೆಲೆಯಲ್ಲಿ ಪ್ರತಿ ಗ್ರಾಮಗಳಲ್ಲಿ ನಡೆಯುವ ಜಾತ್ರೆ ಉತ್ಸವಗಳಲ್ಲಿ ಜನ ಸೇರಿದಾಗ ತೊಗಲುಗೊಂಬೆಯಾಟಕ್ಕೆ ಕಳೆ ಬರುತ್ತದೆ.

ಪ್ರತಿ ಗ್ರಾಮದಲ್ಲಿ ಇವರು ತಮ್ಮ ಕಲೆ ಪ್ರದರ್ಶಿಸಿದ ನಂತರ ಅಲ್ಲಿನ ರೈತಾಪಿ ವರ್ಗದವರು ಕೊಡುವ ದವಸಧಾನ್ಯ, ಆಭರಣಗಳು, ಕುರಿ, ಕೋಳಿ, ದನಕರುಗಳನ್ನು ಪಡೆದು ತಮ್ಮ ಜೀವನವನ್ನು ನಿರ್ವಹಿಸುತ್ತಾರೆ. ಅಲ್ಲದೆ ತಮ್ಮ ತಮ್ಮ ಪಾಲಿನ ಹಳ್ಳಿಗಳನ್ನು ಹಂಚಿಕೊಂಡಿದ್ದು ಅಲ್ಲಿಯೇ ಇವರು ತಮ್ಮ ತೊಗಲುಗೊಂಬೆಯ ಆಟವನ್ನು ಪ್ರದರ್ಶನ ಮಾಡುತ್ತಾರೆ. ಬೇರೆಯವರ ಗ್ರಾಮಗಳಿಗೆ ಯಾವ ಕಾರಣಕ್ಕೂ ತೆರಳುವುದಿಲ್ಲ.

## ತೊಗಲುಗೊಂಬೆಗಳ ಇತಿಹಾಸ

ಅತಿ ಪ್ರಾಚೀನ ಕಲೆ ಎನಿಸಿದ ತೊಗಲುಗೊಂಬೆಯಾಟವು ಮೊಟ್ಟಮೊದಲಿಗೆ ಚೀನಾ ದೇಶದಲ್ಲಿ ಕಂಡುಬಂದಿದೆ. ಪ್ರಾಚೀನ ಕಾಲದಿಂದಲೂ ರಾಜ ಮಹಾರಾಜರುಗಳ ಅರಮನೆಯಲ್ಲಿ ಈ ಕಲೆಯನ್ನು ಪೋಷಿಸಿಕೊಂಡು ಬಂದ ಬಗ್ಗೆ ಹಲವು ಗಾದೆಗಳು ಕಂಡುಬರುತ್ತವೆ. ಜಪಾನ್ ದೇಶದಲ್ಲಿ ಕೂಡ ಇದು ಪ್ರಾಚೀನ ಕಲೆಯಾಗಿತ್ತು ಎಂದು ವಿದ್ವಾಂಸರು ಹೇಳುತ್ತಾರೆ. ಅದೇ ರೀತಿ ಪರ್ಷಿಯ, ಟರ್ಕಿ, ಫ್ರಾನ್ಸ್, ಗ್ರೀಸ್ ದೇಶಗಳಲ್ಲಿ ಪ್ರಚಾರದಲ್ಲಿದ್ದ ಬಗ್ಗೆ ಅಲ್ಲದೆ 17ನೇ ಶತಮಾನದಲ್ಲಿ ಗೀಕ್ ನಲ್ಲಿ ಹೊಸ ರೂಪ ತಾಳಿತೆಂದು ತಿಳಿದುಬರುತ್ತದೆ. ಅನಂತರ ಉತ್ತರ ಆಫ್ರಿಕಾದ ಮುಸ್ಲಿಂ ದೇಶಗಳಲ್ಲಿ ಹಾಗೂ 18ನೇ ಶತಮಾನದಲ್ಲಿ ಇಟಲಿ ಮತ್ತು ಫಾನ್ಸ್ ಗೂ ಕೂಡ ಹರಡಿದರ ಬಗ್ಗೆ ತಿಳಿದುಬರುತ್ತದೆ.

ಭಾರತದ ಪ್ರಾಚೀನ ಕಾವ್ಯಗಳಲ್ಲಿ ಕೂಡ ಈ ಬಗ್ಗೆ ಸಾಕಷ್ಟು ಉಲ್ಲೇಖಗಳು ಸಿಗುತ್ತವೆ. 11ನೇ ಶತಮಾನದಲ್ಲಿಯೇ ಈ ಕಲೆಯು ಪ್ರಚಾರದಲ್ಲಿತ್ತು ಎನ್ನುವ

ವಿಷಯಗಳು ತಿಳಿದುಬರುತ್ತದೆ. ಅಲ್ಲದೆ ಭಗವದ್ಗೀತೆಯ ಪ್ರಕಾರ ಕ್ರಿಸ್ತ ಪೂರ್ವ 3000 ವರ್ಷಗಳ ಹಿಂದಿನಿಂದಲೂ ಪ್ರಚಾರದಲ್ಲಿತ್ತು ಎಂಬುದನ್ನು ವಿದ್ವಾಂಸರು ಹೇಳಿದ್ದಾರೆ. ಇದನ್ನು 'ನೆರಳು ಬೆಳಕಿನ ಆಟ', 'ನೆರಳು ಗೊಂಬೆಯ ಆಟ' ಎಂದು ಕರೆಯುತ್ತಿದ್ದು ಸಂಸ್ಕೃತದ 'ಮಹಾನಾಟಕ'ವನ್ನು ನೆರಳು ಗೊಂಬೆಯ ಆಟಕ್ಕಾಗಿಯೇ ಬರೆದ ಬಗ್ಗೆ ಅಭಿಪ್ರಾಯಗಳು ಇವೆ. ಅದೇ ರೀತಿ ಪ್ರಾಚೀನ ಮಗಧ ಮತ್ತು ಮೌರ್ಯರ ಕಾಲದಲ್ಲೂ ಈ ಕಲೆ ಕಂಡುಬರುತ್ತದೆ.

ದಕ್ಷಿಣ ಭಾರತದಲ್ಲಿ ಕ್ರಿಸ್ತ ಪೂರ್ವ 3ನೇ ಶತಮಾನದಲ್ಲಿ ಈ ಕಲೆ ಕಂಡು ಬರುತ್ತದೆ. ಆಂಧ್ರಪ್ರದೇಶದಲ್ಲಿ ಅದೇ ರೀತಿ ತಮಿಳ್ನಾಡಿನ ತಂಜಾವೂರು ಮೊದಲಾದ ಕಡೆ ಈ ಕಲೆ ಪ್ರಚಾರದಲ್ಲಿದ್ದ ಬಗ್ಗೆ ಆಧಾರಗಳು ಸಿಗುತ್ತವೆ. (ಅದೇ, ಪುಟ–276) ಪ್ರಾಚ್ಯ ಖಂಡದಲ್ಲಿ ಹುಟ್ಟಿಬೆಳೆದ ಈ ಕಲೆ ಚೈನಾದಿಂದ ಆರಂಭಗೊಂಡು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಹರಡಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ರಾಷ್ಟ್ರಕೂಟರ, ಸೇವುಣರ, ಕಲ್ಯಾಣಿ ಚಾಲುಕ್ಯರ, ಕದಂಬರ, ಶಾತವಾಹನರ, ಪಲ್ಲವರ, ಚಾಲುಕ್ಯರ, ಕಾಕತೀಯರ ಕಾಲದಲ್ಲಿ ಅಲ್ಲದೆ ವಿಜಯನಗರ, ತಂಜಾವೂರು ರಾಜರುಗಳ ಕಾಲದಲ್ಲಿ ಅತ್ಯಂತ ಉನ್ನತ ಸ್ಥಿತಿ ಪಡೆದ ಬಗ್ಗೆ ಉದಾಹರಣೆಗಳು ಕಂಡುಬರುತ್ತವೆ. ಪ್ರಾಚೀನ ರೇವುಪಟ್ಟಣಗಳಾದ ಕಳಿಂಗಪಟ್ಟಣ, ಜಿಮಾನಿಪಟ್ಟಣ, ಕೋರಂಗಿ ವಾಡ್ರೇವು ಇವುಗಳ ಮೂಲಕ ವಿದೇಶಕ್ಕೆ ತೆರಳಿದ ಕಲೆ ಇದಾಗಿದೆ.

"ದಕ್ಷಿಣ ಕರ್ನಾಟಕದಲ್ಲಿನ ಬೆಂಗಳೂರು, ಕೋಲಾರ, ಮಂಡ್ಯ, ಹಾಸನ, ತುಮಕೂರುಗಳಲ್ಲಿ ವ್ಯಾಪಕವಾಗಿ ಈ ಕಲೆ ಹರಡಿಕೊಂಡಿದ್ದು ಇದರಲ್ಲಿ ಅಪಟ, ಪಾತಂಗಿ, ಅಟಾಪು ಮತ್ತು ಸಿಂದೆ ಎಂದು ನಾಲ್ಕು ಪಂಗಡಗಳಿವೆ. ಗೊಂಬೆಯಾಟದ ಜೊತೆ ಇವರು ನಾಟಕ ಕಲಿಸುವುದು, ಹರಿಕಥೆ ಮಾಡುವುದು, ವ್ಯವಸಾಯವನ್ನು ಮಾಡುವುದು, ಹಳ್ಳಿ ಹಳ್ಳಿಗೆ ಹೋಗಿ ಜನರ ಮನಸ್ಸು ಸಂತೋಷಪಡಿಸಿ ಅವರಿಂದ ಧವಸಧಾನ್ಯ ಕಾಣಿಕೆ ಸಂಗ್ರಹಿಸಿ ಜೀವನ ಸಾಗಿಸುತ್ತಾರೆ." (ಜನಪ್ರದಶ್ರೀ–ಜನಪ್ರಿಯಪು 319)

## ಗೊಂಬೆಗಳ ತಯಾರಿಸುವಿಕೆ

ತೊಗಲುಗೊಂಬೆಯ ರಚನೆಗೆ ಜಿಂಕೆಯ ಚರ್ಮ ಅಥವಾ ಆಡಿನ ಚರ್ಮ ಉಪಯೋಗಿಸುತ್ತಾರೆ. ಕೆಲವೆಡೆ ಎಮ್ಮೆಯ ಚರ್ಮವನ್ನು ಬಳಸುವುದುಂಟು. ಜಿಂಕೆಯ ಚರ್ಮ ನಯ ಮತ್ತು ಸೂಕ್ಷ್ಮವಾಗಿದ್ದು ಬಹುಪಾಲು ಪಾರದರ್ಶಕ

ISSN : 3048-7137

ವಾಗಿರುತ್ತದೆ. ಅಲ್ಲದೆ ಸದಾಕಾಲ ಯಾವ ಬದಲಾವಣೆಗೂ ಒಳಗಾಗದೆ ಒಂದೇ ರೂಪದಲ್ಲಿ ಉಳಿದು ಬರುವ ಶಕ್ತಿಯುಳ್ಳದ್ದಾಗಿದೆ. ಆದರೆ ಆಡಿನ ಚರ್ಮವು ಕೆಲವೊಂದು ಬಾರಿ ಚಳಿಗೆ ಮತ್ತು ಮಳೆಗೆ ಸುಕ್ಕುಗಟ್ಟುತ್ತದೆ. ಇತ್ತೀಚಿಗೆ ಜಿಂಕೆ ಚರ್ಮವು ಸಿಗುವುದು ಕಷ್ಟವಾಗಿರುವುದರಿಂದ ಆಡಿನ ಚರ್ಮದ ಬಳಕೆ ಹೆಚ್ಚಾಗಿ ಕಂಡುಬರುತ್ತದೆ. ಕೆಲವೊಂದು ಬಾರಿ ದೇವತಾ ಪಾತ್ರಗಳಿಗೆ ಮೀಸಲಾದ ರಾಮಾಯಣ, ಮಹಾಭಾರತದ ಪ್ರಸಂಗದ ಗೊಂಬೆಗಳನ್ನು ಜಿಂಕೆ ಚರ್ಮ ದಿಂದಲೇ ಮಾಡಬೇಕೆಂಬ ನಿಯಮವಿದೆ. ಆಂಧ್ರ ಹಾಗೂ ಅದರ ಗಡಿಭಾಗಗಳಲ್ಲಿ ಗೊಂಬೆಯ ರಚನೆಗೆ ಎಮ್ಮೆ ಚರ್ಮವನ್ನು ಬಳಸುವುದು ಕಂಡುಬರುತ್ತದೆ. ಆ ಭಾಗದಲ್ಲಿ ಆಳೆತ್ತರದ ಗೊಂಬೆಗಳ ರಚನೆಗೆ ಹೆಚ್ಚಾಗಿ ಎಮ್ಮೆಯ ಚರ್ಮವೇ ಬೇಕಾಗುತ್ತದೆ. ಹೀಗೆ ಚರ್ಮವನ್ನು ಹದಗೊಳಿಸುವುದರ ಮೂಲಕ ಅದನ್ನು ಪಾರದರ್ಶಕ ರೂಪಕ್ಕೆ ತರುತ್ತಾರೆ. ನಂತರ ಅದರ ಮೇಲೆ ಬೇಕಾದ ಚಿತ್ರಗಳನ್ನು ಅಂದವಾಗಿ ಬರೆದು ಆಭರಣ, ಸೀರೆಗಳ ದಡಿ, ರಥದ ಚಕ್ರ, ಕಿರೀಟ ಇತ್ಯಾದಿ ಕುಸುರಿ ಕೆಲಸಗಳನ್ನು ಬಹಳ ಸೂಕ್ಷ್ಮವಾಗಿ ಮಾಡುತ್ತಾರೆ. ಹಾಗೆಯೇ ಹದವರಿತ ಬಣ್ಣವನ್ನು ಹಾಕುತ್ತಾರೆ. ಹೆಚ್ಚಾಗಿ ದೇವತಾ ಪಾತ್ರದ ಗೊಂಬೆಗಳಿಗೆ ನೀಲಿ, ನಸುಗೆಂಪು, ಹಳದಿ ಬಣ್ಣಗಳನ್ನು, ಅದೇ ರೀತಿ ಘೋರ ಪಾತ್ರಗಳಿಗೆ ಸಿಂಧೂರ, ಕಡೆಗೆಂಪು, ಕಪ್ಪು, ಹಳದಿ ಬಣ್ಣಗಳನ್ನು ಉಪಯೋಗಿಸುತ್ತಾರೆ. ಬೇರೆ ಬೇರೆ ರೀತಿಯ ಗಿಡಮೂಲಿಕೆಗಳಿಂದ ಸ್ವತಃ ಅವರೇ ಬಣ್ಣವನ್ನು ತಯಾರಿಸಿಕೊಳ್ಳುತ್ತಾರೆ. ಹೀಗಾಗಿ ಬಹುಕಾಲದವರೆಗೂ ಬಣ್ಣ ಮಸುಕಾಗದಂತೆ ಈ ಗೊಂಬೆಗಳು ಉಳಿಯುತ್ತವೆ. ಈಗ ಇಂಥ ಬಣ್ಣಗಳ ಸ್ವತಃ ತಯಾರಿ ನಿಂತು ಹೋಗಿದ್ದು ಆಧುನಿಕ ಬಣ್ಣಗಳನ್ನೇ ಬಳಸುತ್ತಾರೆ. ಗೊಂಬೆಯ ಆಕಾರ, ಚೌಕಟ್ಟು, ವೇಷ ಭೂಷಣಗಳ ಬಗ್ಗೆ ಮುಂಚೆಯೇ ರೇಖಾಚಿತ್ರ ಬಿಡಿಸಿಕೊಂಡು ಆನಂತರ ಬಣ್ಣ ಹಾಕುತ್ತಾರೆ. ಹೀಗೆ ಬಣ್ಣದ ಕಲೆ ಮತ್ತು ಅದಕ್ಕೆ ಸಂಬಂಧಿಸಿದ ಪರಿಪೂರ್ಣ ಜ್ಞಾನವು ರಚನೆಗೆ ಬೇಕಾಗುತ್ತದೆ. ಇತ್ತೀಚಿಗೆ ಬೇರೆಯವರು ತಯಾರಿಸಿ ಕೊಡುತ್ತಿದ್ದಾರೆ. ಕೆಲವೊಂದು ಮಠಮಾನ್ಯಗಳ ಸ್ವಾಮಿಗಳು, ಜಗದ್ಗುರುಗಳು ಮಾಡಿಸಿಕೊಟ್ಟರೆ, ಇತ್ತೀಚಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು, ವಿವಿಧ ಅಕಾಡೆಮಿಗಳು ಮಾಡಿಸಿಕೊಡುತ್ತಿದ್ದ ಉದಾಹರಣೆಗಳಿವೆ. ಇತ್ತೀಚಿಗೆ ಅನೇಕ ಗ್ರಾಮದವರು ತಮ್ಮ ಊರಿಗೆ ಸಮೃದ್ಧಿ ಆದ ಬಗ್ಗೆ ಸಂತೋಷದಿಂದ ಇಂತಹ ತೊಗಲುಗೊಂಬೆಗಳನ್ನು ಮಾಡಿಸಿ ಕೊಡುತ್ತಿರುವುದು ಕಂಡುಬರುತ್ತದೆ. ಅದರಲ್ಲಿ ಅವರ ವಿಳಾಸವನ್ನು ಹಾಕುತ್ತಿದ್ದು ಕಲಾವಿದರು ದಾನಿಗಳ ಹೆಸರನ್ನು ಹೇಳುತ್ತಿದ್ದಾರೆ. ಇದರಿಂದ ಸ್ಫೂರ್ತಿಗೊಂಡು ಸ್ವಯಂಪ್ರೇರಣೆಯಿಂದಲೂ

ತೊಗಲುಗೊಂಬೆಗಳನ್ನು ಮಾಡಿಸಿ ಕೊಡುತ್ತಿದ್ದಾರೆ.

ಗೊಂಬೆಗಳು ನೇರವಾಗಿ ನಿಂತುಕೊಳ್ಳಲು ಅನುಕೂಲ ಆಗುವಂತೆ ಬಿದಿರಿನ ಅಥವಾ ಲಾಳದ ಕಡ್ಡಿಗಳನ್ನು ಮಧ್ಯಕ್ಕೆ ಸೀಳಿ ಅದರ ಮಧ್ಯೆ ಗೊಂಬೆಗಳನ್ನು ಸಿಕ್ಕಿಸಿ ದಾರದಿಂದ ಅಲ್ಲಲ್ಲಿ ಹೊಲಿಗೆ ಹಾಕುತ್ತಾರೆ. ಗೊಂಬೆಯನ್ನು ಹಿಡಿದು ಕುಣಿಸಲು ಅನುಕೂಲವಾಗುವಂತೆ ಕೆಳಗಡೆ ಅರ್ಧ ಅಡಿ ಉದ್ದದಷ್ಟು ಕಡ್ಡಿಯನ್ನು ಬಿಟ್ಟಿರುತ್ತಾರೆ. ಇದು ಮೂಲ ಗೊಂಬೆಗಳ ಏಕರೂಪ. ಆ ನಂತರದಲ್ಲಿ ಕೈಕಾಲು, ಮುಖಗಳ ಚಲನೆಯುಳ್ಳ ಗೊಂಬೆಗಳ ಪ್ರದರ್ಶನ ಚಾಲ್ತಿಗೆಬಂತು. ಸೂತ್ರದ ಗೊಂಬೆಗಳಿಗೆ ಇರುವ ಅಂಗಾಂಗ ಚಲನೆಯ ತಂತ್ರವನ್ನೇ ಇಲ್ಲಿ ಬೇರೊಂದು ರೀತಿಯಲ್ಲಿ ಮಾಡಿಕೊಂಡಿದ್ದಾರೆ. ಕತ್ತು, ಸೊಂಟ, ತೋಳು, ತೊಡೆಯ ಕೀಲು ಮತ್ತು ಮಂಡಿ ಇವುಗಳೆಲ್ಲ ಬಿಡಿಬಿಡಿ ಆಗಿದ್ದು ದಾರದ ಸಹಾಯದಿಂದ ಅವುಗಳನ್ನು ಜೋಡಿಸಲಾಗಿರುತ್ತದೆ. ಕತ್ತು, ಎದೆಯ ಭಾಗ, ಸೊಂಟ ಇವು ನೇರವಾಗಿ ನಿಲ್ಲಲು ಅನುಕೂಲ ಆಗುವಂತೆ ಅವು ಮೂರನ್ನು ಸೇರಿಸಿ ಒಂದು ಕಡ್ಡಿಯನ್ನು ಜೋಡಿಸಲಾಗಿರುತ್ತದೆ. ಆ ಕಡ್ಡಿಯ ಸಹಾಯದಿಂದ ಆಟ ಆಡಿಸುತ್ತಾರೆ. ಚಿಕ್ಕ ಗೊಂಬೆಗಳಾದರೆ ಕುಳಿತುಕೊಂಡು ಆಡಿಸುತ್ತಾರೆ. ಆದರೆ ಆಳೆತ್ತರದ ಗೊಂಬೆಗಳಾದರೆ ನಿಂತುಕೊಂಡೇ ಆಡಿಸಬೇಕಾಗುತ್ತದೆ.

## ಗೊಂಬೆಗಳ ರಕ್ಷಣೆ

ಗೊಂಬೆಗಳನ್ನು ಸುಕ್ಕು ಬಾರದಂತೆ ಒಣಗಿ ಬರಟಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಅವರು ಗಿಡಮೂಲಿಕೆಗಳಿಂದ ತಯಾರಿಸಿದ ಒಂದು ಬಗೆಯ ದ್ರವವನ್ನು ಅವುಗಳಿಗೆ ಆಗಿಂದಾಗೆ ಬಳಿಯುತ್ತಾರೆ. ಹೀಗೆ ಸಂರಕ್ಷಿಸುವುದರಿಂದ ಗೊಂಬೆಗಳು ಮೂಲ ರೂಪವನ್ನು ಉಳಿಸಿಕೊಂಡು ನೂರಾರು ವರ್ಷಗಳ ಕಾಲ ಬಾಳಿಕೆ ಬರುತ್ತವೆ. ಆಟದ ನಂತರ ಗೊಂಬೆಗಳನ್ನು ಅಚ್ಚುಕಟ್ಟಾಗಿ ಇಡಲು ಅದಕ್ಕಾಗಿ ಮಾಡಿದ ಬಿದಿರು ಪೆಟ್ಟಿಗೆಯಲ್ಲಿ ಜೋಡಿಸಿ ಇಡುತ್ತಾರೆ. ಇದಕ್ಕೆ 'ಬಾದಲಿ' ಎನ್ನುವರು. ಇದು ಅವರಿಗೆ ಪೂಜ್ಯವಸ್ತು. ಹೀಗಾಗಿ ವೃತ್ತಿಯನ್ನು ಕೈಬಿಟ್ಟ ಅನೇಕರು ಆ ಗೊಂಬೆಗಳನ್ನು ಮನೆಯಲ್ಲಿ ಹಾಗೆ ಇಟ್ಟುಕೊಳ್ಳದೆ ಅವನ್ನು ನೀರಿನಲ್ಲಿ ತೇಲಿ ಬಿಡುತ್ತಾರೆ. ಕರ್ನಾಟಕದಲ್ಲಿ ಮೂರು ಜಾತಿಯ ಗೊಂಬೆಗಳು ಕಂಡುಬರುತ್ತಿದ್ದು ಕೈಕಾಲುಗಳ ಚಲನೆ ಇಲ್ಲದ ಆದರೆ ಸುಂದರ ಹಾಗೂ ಕಲಾತ್ಮಕವಾದ ಗೊಂಬೆಗಳಾಗಿದ್ದು ಅವುಗಳು ಬಹುತೇಕ ಉತ್ತರ ಕರ್ನಾಟಕದವುಗಳಾಗಿವೆ. ಈಗಾಗಲೇ ಹೇಳಿದಂತೆ ಕೈಕಾಲುಗಳ ಚಲನೆಯುಳ್ಳ ಚುರುಕಾಗಿ ಆಡಿಸಬಲ್ಲ ಗೊಂಬೆಗಳು ದಕ್ಷಿಣ ಕರ್ನಾಟಕದ

ಗೊಂಬೆಗಳು. ಅವೆರಡು ಗೊಂಬೆಗಳು ಒಂದರಿಂದ ಮೂರು ಅಡಿ ಎತ್ತರ ಇರುತ್ತವೆ. ಆಂಧ್ರ ಭಾಗದ ಗೊಂಬೆಗಳು ಚಲನೆಯುಳ್ಳ ಅಂದರೆ ಕೀಲುಗಳನ್ನು ಹೊಂದಿರುವ ಗೊಂಬೆಗಳಾಗಿದ್ದು ಆಳೆತ್ತರ ಇರುತ್ತವೆ. ಅವುಗಳನ್ನು ನಿಂತೇ ಆಡಿಸಬೇಕು ನಿಂತಾಗ ಸ್ವತಃ ಗೊಂಬೆಗಳಿಂದಲೇ ತಮ್ಮನ್ನು ಕಲಾವಿದರು ಮರೆಮಾಡಿಕೊಳ್ಳುತ್ತಾರೆ.

"ತೊಗಲು ಗೊಂಬೆ ಆಡಿಸುವುದು ಒಂದು ಕಲೆಯಾದರೆ ಆ ಗೊಂಬೆಯನ್ನು ತಯಾರಿಸುವುದು ಇನ್ನೊಂದು ವಿಶೇಷ ಕಲೆ. ಅದು ಹೇಗೆಂದರೆ ಜಿಂಕೆ ಚರ್ಮವನ್ನು ನೀರಿನಲ್ಲಿ ನೆನೆಸಿ ಚರ್ಮದ ಮೇಲಿನ ಕೂದಲನ್ನು ತೆಗೆಯುತ್ತಾರೆ. ಒಣಗಿ ಚೆನ್ನಾಗಿ ಹದ ಬಂದಾಗ ಅದು ಪಾರದರ್ಶಕ ಆಗುತ್ತದೆ. ಪಾತ್ರಗಳ ಲಕ್ಷಣ ಹಾಗೂ ಔಚಿತ್ಯಕ್ಕೆ ತಕ್ಕಂತೆ ಕತ್ತರಿಸಿ ಯಾವ ಭಾಗಗಳಿಗೆ ಯಾವ ಬಣ್ಣ ಹಾಕಬೇಕೆಂದು ತೀರ್ಮಾನಿಸುತ್ತಾರೆ. ಬಣ್ಣದಲ್ಲಿ ವಿವಿಧ ಪಾತ್ರಗಳನ್ನು ಹೊರ ಹೊಮ್ಮಿಸುವ ಚಿತ್ರಕಲಾವಿದರು ಜನ ಮೆಚ್ಚುಗೆ ವ್ಯಕ್ತಪಡಿಸುವಂತೆ ಗೊಂಬೆಗಳನ್ನು ತಯಾರಿಸುತ್ತಾರೆ. ಬಣ್ಣಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ಗೊಂಬೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸಲು ಅನುಕೂಲ ಆಗುವಂತೆ ಕೈಕಾಲುಗಳು ಮತ್ತು ಕತ್ತುಗಳಿಗೆ ಕೀಲನ್ನು ಅಳವಡಿಸುತ್ತಾರೆ. ಕೈ ಚಳಕದಿಂದ ಆಡಿಸಲು ಅನುಕೂಲ ಆಗುವಂತೆ ಮಾಡುತ್ತಾರೆ ." (ಅದೇ, ಪು. 92)

ಹೀಗೆ ಅವಶ್ಯಕತೆಗೆ ತಕ್ಕಂತೆ ಗೊಂಬೆಗಳನ್ನು ತಯಾರಿಸಿಕೊಂಡು ಕೈ, ತಲೆ, ಮೂಗು, ಶರೀರ ಹೀಗೆ ದೇಹದ ನಾನಾ ಅಂಗಗಳನ್ನು ಪ್ರತ್ಯೇಕವಾಗಿ ಕತ್ತರಿಸಿಕೊಳ್ಳುತ್ತಾರೆ. ದಾರಗಳಿಂದ ಅವುಗಳನ್ನು ಕೂಡಿಸಿರುತ್ತಾರೆ. ಪ್ರತಿಯೊಂದು ಗೊಂಬೆಯ ಎಲ್ಲಾ ಅಂಗಗಳ ತುದಿಗೂ ದಾರ ಕಟ್ಟಿ ಅವುಗಳನ್ನೆಲ್ಲಾ ಸೇರಿಸಿ ತಮ್ಮ ಕೈಚಳಕದಿಂದ ಗೊಂಬೆಗಳನ್ನು ನಾನಾ ಬಂಗಿಗಳಲ್ಲಿ ಕುಣಿಸುವರು. ಪರದೆಯ ಮೇಲೆ ಈ ಗೊಂಬೆಯ ಆಟವನ್ನು ನೋಡುವುದೇ ಒಂದು ವಿಶೇಷ ಮನರಂಜನೆ. ತೆಳುವಾದ ಬಟ್ಟೆಯ ತೆರೆ ಕಟ್ಟುತ್ತಾರೆ. ತೆರೆಯ ಹಿಂದೆ ದೀಪದ ಬೆಳಕಿನಲ್ಲಿ ಬೊಂಬೆ ಆಟವನ್ನು ವ್ಯವಸ್ಥೆ ಮಾಡುತ್ತಾರೆ. ಗೊಂಬೆಗಳನ್ನು ಆಡಿಸುವವರು ಪರದೆಯ ಮೇಲ್ಭಾಗದಲ್ಲಿ ಆಸರೆ ಪಡೆಯುತ್ತಾರೆ. ಬೊಂಬೆಗಳು ದಾರದ ಮೂಲಕ ಕುಣಿಯುವಂತೆ ಕಲಾವಿದರು ವ್ಯವಸ್ಥೆ ಮಾಡುತ್ತಾರೆ. ಪಾತ್ರಕ್ಕೆ ತಕ್ಕಂತೆ ಈ ಕಲಾವಿದರು ಸಂಭಾಷಣೆ ಹೇಳುತ್ತಾರೆ. ಆದರೆ ಪ್ರೇಕ್ಷಕರಿಗೆ ಗೊಂಬೆಗಳು ಮಾತ್ರವೇ ಕಾಣುತ್ತವೆ. ಹಾಗಾಗಿ ಅವುಗಳು ನರ್ತಿಸಿದಂತೆ ಭಾಸವಾಗುತ್ತದೆ. ಈ ಕಾರಣಕ್ಕಾಗಿ ತೊಗಲುಗೊಂಬೆಯಾಟ ಅದ್ಭುತ ಚಮತ್ಕಾರ ಆಟವಾಗಿ ನಮ್ಮ ಸಾಂಸ್ಕೃತಿಕ

ಬದುಕಿನ ಮೇಲೆ ಬೆಳಕು ಚೆಲ್ಲುತ್ತದೆ. (ತುಮಕೂರು ಜಿಲ್ಲಾ ಜನಪದ ಕಲೆಗಳು ಹೆಚ್.ಎಸ್. ಸಿದ್ದಲಿಂಗಪ್ಪ, ಪು. 63)

## ಕಥಾವಸ್ತುವಿಗೆ ತಕ್ಕ ಗೊಂಬೆಗಳು

ಒಂದು ಕಾಲಕ್ಕೆ ಸೂತ್ರದ ಗೊಂಬೆಯಾಟ ಸಮಾಜದ ಮೇಲ್ವರ್ಗದವರ ಮನರಂಜನಾ ಕಲೆ ಆಗಿರುವಂತೆ, ತೊಗಲುಗೊಂಬೆಯಾಟ ಕೆಳವರ್ಗದವರ ಮನೋರಂಜನಾ ಕಲೆ ಆಗಿತ್ತು. ಗೊಂಬೆಗಳು ಚಪ್ಪಟೆ ಆಗಿದ್ದು ತೊಗಲಿನಿಂದ ಮಾಡಿರುವುದರಿಂದ ಅವುಗಳ ನೆರಳಿನ ಪ್ರದರ್ಶನ, ಸಂಭಾಷಣೆ ಹೆಚ್ಚು ಆಕರ್ಷಣೀಯವಾಗಿ ಕಾಣಬರುತ್ತದೆ. ನಾಲ್ಕು ಅಥವಾ ಐದು ಚದರ ಅಡಿ ರಂಗವೇದಿಕೆಯನ್ನು ಅಣಿಗೊಳಿಸಿ ಬಿಳಿಯ ಪರದೆಯನ್ನು ಹಾಕಿರುತ್ತಾರೆ. ಪರದೆಯ ಹಿಂದೆ ದೂರದಲ್ಲಿ ಪ್ರಕಾಶಮಾನವಾಗಿ ಉರಿಯುವ ಬೆಳಕಿನ ಪಂಜನ್ನು ಉರಿಸುತ್ತಾ ಗೊಂಬೆಗಳನ್ನು ಆಡಿಸುತ್ತಾರೆ. ಕ್ಷಪ್ಪವಾದ ದಾರ ತೆಳ್ಳನೆಯ ಕಟ್ಟಿಗೆಯಿಂದ ಗೊಂಬೆಗಳ ಚಲನವಲನಗಳನ್ನು ನಿಯಂತ್ರಿಸಲಾಗುತ್ತದೆ. ಇವುಗಳಿಗೆ ಸೂತ್ರಧಾರ ಇರುತ್ತಾನೆ. ಗಂಡು ಪಾತ್ರಕ್ಕೆ ತಕ್ಕಂತೆ ಗಂಡಸರು, ಸ್ತ್ರೀ ಪಾತ್ರಕ್ಕೆ ತಕ್ಕಂತೆ ಹೆಣ್ಣು ಮಕ್ಕಳು, ಅಂತೆಯೇ ಸಂಭಾಷಣೆ ಹೇಳುವ ಕೌಟುಂಬಿಕ ಕಲಾವಿದರು ಇದರಲ್ಲಿ ಕಾಣುತ್ತಾರೆ. ಇಂತಹ ಪ್ರದರ್ಶನ ನಾಲ್ಕರಿಂದ ಐದು ಗಂಟೆಯವರೆಗೆ ನಡೆಯುತ್ತದೆ. ಪರದೆಯ ಹಿಂದೆ ಐದರಿಂದ ಆರು ಮಂದಿ ಕುಳಿತಿರುತ್ತಾರೆ. ಒಬ್ಬರು ಗೊಂಬೆಗಳನ್ನು ಆಡಿಸುತ್ತಿದ್ದರೆ ಉಳಿದವರು ತಬಲ, ತಾಳಮದ್ದಳೆ, ಹಾರ್ಮೋನಿಯಂ ಇತ್ಯಾದಿ ವಾದ್ಯಗಳನ್ನು ನುಡಿಸುತ್ತಾರೆ. ಭಾಗವತನ ಹಾಡಿಗೆ ಧ್ವನಿಯನ್ನು ಜೋಡಿಸುತ್ತಾರೆ.

## ಕಥಾವಸ್ತುವಿಗೆ ತಕ್ಕ ಗೊಂಬೆಗಳ ತಯಾರಿ

ತೊಗಲುಗೊಂಬೆಯಾಟಕ್ಕೆ ಬಳಸಿಕೊಳ್ಳುವ ಕಥಾವಸ್ತು ರಾಮಾಯಣ, ಮಹಾಭಾರತ, ಭಾಗವತಗಳಿಗೆ ಸಂಬಂಧಿಸಿದ್ದವುಗಳಾಗಿರುತ್ತವೆ. ಭೀಮ, ದುರ್ಯೋಧನ, ರಾವಣರಂತ ಪಾತ್ರಗಳು ಹೆಚ್ಚು ಕೆಂಪು, ಕಪ್ಪು ಬಣ್ಣಗಳಿಂದ ಕೂಡಿದ್ದು ರಂಗಾಗಿರುತ್ತವೆ. ಅವುಗಳ ರೌದ್ರ ರೂಪವನ್ನು ತೋರಿಸಲು ತಮ್ಮ ಬಣ್ಣಗಾರಿಕೆಯಲ್ಲಿಯೇ ಸ್ಪಷ್ಟವಾಗಿ ಮೂಡಿಸಿಬಿಟ್ಟಿರುತ್ತಾರೆ. ಹಿಡಿಂಬೆ, ಶೂರ್ಪನಕಿ ಪಾತ್ರಗಳ ಚಿತ್ರಣವು ಅಷ್ಟೇ ಬಿರುಸಾಗಿ ಅವುಗಳ ಸ್ವರೂಪವನ್ನು ಹೊರ ಹೊಮ್ಮಿಸುವಂತೆ ಇರುತ್ತವೆ. ರಾಮ, ಕೃಷ್ಣ, ಅರ್ಜುನ, ಧರ್ಮರಾಯ, ಮುಂತಾದ ಪಾತ್ರಗಳ ಗೊಂಬೆಗಳು ನೋಡಲು ಅಂದವಾಗಿ ಇರುತ್ತವೆ. ರಥದ ಮೇಲೆ ಕುಳಿತು

ISSN : 3048-7137

ಯುದ್ಧ ಮಾಡುವ ಗೊಂಬೆಗಳು ಆನೆ, ಒಂಟೆ, ಕುದುರೆ ಮುಂತಾದ ಪ್ರಾಣಿಗಳ ಗೊಂಬೆಗಳು ನೋಡಲು ಅಲಂಕಾರಿಕವಾಗಿರುತ್ತವೆ. ಅವುಗಳಲ್ಲೆಲ್ಲಾ ಕಲಾಕಾರನ ವಿಶಿಷ್ಟ ಕೌಶಲ್ಯವನ್ನು ಗುರುತಿಸಬಹುದು. ಹೆಣ್ಣು ಗೊಂಬೆಗಳು ಕೂಡ ವಿಶಿಷ್ಟವಾಗಿರುತ್ತವೆ. ಇವುಗಳ ವೇಷಭೂಷಣ ಸಾಮಾನ್ಯವಾಗಿ ಬಯಲಾಟದ ವೇಷಭೂಷಣದಂತೆ ಇರುತ್ತದೆ. ಸ್ತ್ರೀ ಪಾತ್ರದ ಗೊಂಬೆಗಳಲ್ಲಿ ಸಾಮಾನ್ಯವಾಗಿ ಎರಡು ವಿಧ. ರಾಣಿಯರಿಗೆ ಉಚಿತವಾದ ವೇಷಭೂಷಣಗಳಿಂದ ಕೂಡಿದ ಗೊಂಬೆಗಳು ಹಾಗೂ ಸಾಮಾನ್ಯ ವರ್ಗದ ಗೊಂಬೆಗಳು. ಇವನ್ನು ಬಿಟ್ಟರೆ ರಾಕ್ಷಸಿ ವರ್ಗದ ಹಿಡಂಬಿ, ಶೂರ್ಪನಕಿಯಂತ ಗೊಂಬೆಗಳು ಪ್ರತ್ಯೇಕವಾಗಿ ಇರುತ್ತದೆ. ಸ್ತ್ರೀ ಪಾತ್ರದ ಗೊಂಬೆಗಳು ಹೆಚ್ಚಾಗಿ ನೋಡಲು ಉದ್ದನೆಯ ಮೂಗು, ಆಗಲವಾದ ಕಣ್ಣು ಜೊತೆಗೆ ಬೈತಲೆ ತೆಗೆದು ಕಟ್ಟಿದ ತುರುಬು, ಅದಕ್ಕೆ ಹೂವನ್ನು ಮುಡಿಸಿರುತ್ತಾರೆ. ಬೈತಲೆಯಿಂದ ಹಣೆಯ ಮೇಲೆ ಬಿಟ್ಟ ಆಭರಣ, ಕಿವಿಗೆ ಆಭರಣ, ಮೂಗಿಗೆ ಮೂಗುತಿ ಹಾಗೂ ಬುಲಾಕು, ಕೈಬಳೆ ಇತ್ಯಾದಿಗಳು ಇರುತ್ತವೆ. ಸೀರೆ ಮತ್ತು ರವಿಕೆ ಇವುಗಳು ಚೌಕುಳಿ ಆಕಾರದಲ್ಲಿ ಇರುತ್ತವೆ.

ಅಲ್ಲದೆ ಕಥಾ ಪ್ರಸಂಗಗಳಿಗೆ ತಕ್ಕಂತೆ ಶಿವ, ಜಲಂಧರ, ತ್ರಿಪುರ ಸಂಹಾರ, ದೇವಿ ಮಹಾತ್ಮೆ, ಸೀತಾ ಸ್ವಯಂವರ ಮೊದಲಾದ ಪ್ರಸಂಗಗಳಿಗೆ ತಕ್ಕಂತೆ ಗೊಂಬೆಗಳ ರಚನೆ ಮಾಡಿರುತ್ತಾರೆ. ಅಲ್ಲದೇ ಅನೇಕ ಪ್ರವಾದಿಗಳ ಕಥೆ, ಬಸವೇಶ್ವರ ಕಥಾಪ್ರಸಂಗ, ಕಬೀರದಾಸ ಕಥೆ, ಮೀರಾಬಾಯಿ ಕಥೆ. ಹೀಗೆ ಅನೇಕ ಧಾರ್ಮಿಕ ಮಹಾಪುರುಷರ ಕಥೆಗಳಿಗೆ ಆದ್ಯತೆ ನೀಡುತ್ತಾರೆ. ಆಧುನಿಕ ಕಥೆಗಳನ್ನು ಆಧರಿಸಿರುವ ಪ್ರಸಂಗಗಳೂ ಉಂಟು. ಇತ್ತೀಚಿಗೆ ಸಮಯದ ಅಭಾವದಿಂದಾಗಿ ಒಂದೆರಡು ಗಂಟೆಗಳಿಗೆ ಸೀಮಿತವಾಗಿರುವ ಕಥೆಗಳು ಇರುತ್ತವೆ. ಇಂತಹ ಕಥೆಗಳಿಗೆ ತಕ್ಕಂತೆ ಪಾತ್ರಗಳು ಆಯಾ ಪಾತ್ರಗಳಿಗೆ ತಕ್ಕಂತೆ ಗೊಂಬೆಗಳು ರಚನೆಯಾಗಿದ್ದು ಅವುಗಳ ಉಡುಗೆ ತೊಡುಗೆ, ಅಲಂಕಾರ ಇತ್ಯಾದಿ ಸಮಯೋಚಿತವಾದ ರೀತಿಯಲ್ಲಿ ಅಲಂಕಾರಗೊಳಿಸಿರುವುದನ್ನು ಕಾಣುತ್ತೇವೆ.

## ಆಟ ಆರಂಭ ಹೇಗೆ?

ಆಟ ಆರಂಭವಾಗುತ್ತಿದ್ದಂತೆ ವಿಘ್ನೇಶ್ವರನ ಪ್ರಾರ್ಥನೆ ಪ್ರಾರಂಭವಾಗುತ್ತದೆ. ಗೊಂಬೆಗಳು ಆಕರ್ಷಣೀಯವನ್ನಾಗಿ ಮಾಡಿ ಪ್ರೇಕ್ಷಕರನ್ನು ಕಲಾಪ್ರಪಂಚಕ್ಕೆ ಕರೆದೊಯ್ಯುವ ಚಮತ್ಕಾರವನ್ನು ಆಡಿಸುವಾತನು ತೋರುತ್ತಾನೆ. ಅವನು ಚುರುಕಾಗಿದ್ದಷ್ಟೂ ಕಲೆಗಾರಿಕೆ ಉತ್ತಮವಾಗಿರುತ್ತದೆ. ಆಯಾ ಪಾತ್ರಗಳ ಗತ್ತುಗಾರಿಕೆಗೆ ಸರಿ ಹೊಂದುವಂತೆ ಹಾಡನ್ನು, ಸಂಭಾಷಣೆಯನ್ನು ಜೋಡಿಸಿ ತನ್ನ

ಎರಡೂ ಕೈಗಳಿಂದ ಒಂದೊಂದು ಗೊಂಬೆಗಳನ್ನು ಹಿಡಿದು ಕುಣಿಸುವ ರೀತಿ ಅಚ್ಚರಿಯನ್ನುಂಟುಮಾಡುತ್ತದೆ. ಯುದ್ಧದ ಸಂದರ್ಭ, ಬಾಣವನ್ನು ಬಿಡುವ ಗತ್ತು, ಗದೆ ಬೀಸುವ ವೈಖರಿ, ಮಾತಿನ ಗತ್ತಿಗೆ ಕೈಕಾಲುಗಳನ್ನಾಡಿಸುವ ರೀತಿ ಇವೆಲ್ಲವೂ ಅದ್ಭುತವಾಗಿ ತೋರುತ್ತವೆ. ಒಂದು ಪಾತ್ರದ ಪ್ರವೇಶ ಮತ್ತು ನಿರ್ಗಮನವು ಚಮತ್ಕಾರದಿಂದ ಕೂಡಿರುತ್ತದೆ. ನಾಲ್ಕಾರು ಪಾತ್ರಗಳು ಒಟ್ಟಿಗೆ ಸೇರಿದಾಗ ಅವುಗಳ ಸಂಭಾಷಣೆ, ಹಾಡು ಅದಕ್ಕೆ ತಕ್ಕ ಅಭಿನಯವನ್ನು ಏಕಕಾಲದಲ್ಲಿ ಕಲಾವಿದ ನಿರ್ವಹಿಸಬೇಕಾಗುತ್ತದೆ. ಮೈಸೂರು ಭಾಗದ ಗೊಂಬೆ ಆಟದಲ್ಲಿ ನಾಲ್ಕಾರು ಜನ ಕಲಾವಿದರು ಒಟ್ಟಿಗೆ ಗೊಂಬೆ ಆಡಿಸುವ ಕ್ರಮವು ಕಂಡುಬರುತ್ತದೆ. ಅದೇ ರೀತಿ ಕೆಲವೆಡೆ ಒಬ್ಬರು ಅಥವಾ ಇಬ್ಬರು ವ್ಯಕ್ತಿಗಳು ಮಾತ್ರ ಗೊಂಬೆಯನ್ನು ಕುಣಿಸುತ್ತಿದ್ದು ಉಳಿದಂತೆ ಸಂಭಾಷಣೆ, ಚರ್ಚೆ, ಹಿಮ್ಮೇಳ ಹಾಗೂ ಸೂತ್ರಧಾರನ ಮಾತುಗಳು ಬೇರೆ ಬೇರೆ ಇರುತ್ತವೆ.

## ಸಾಹಿತ್ಯ

ಇಲ್ಲಿಯ ಸಾಹಿತ್ಯವು ಮಹಾಭಾರತ, ರಾಮಾಯಣ, ಪುರಾಣ, ಭಾಗವತ ಮತ್ತು ಜನಪದ ಕಥೆಗಳಿಗೆ ಸಂಬಂಧಿಸಿದ್ದೇ ಆಗಿರುತ್ತದೆ. ಅವೆಲ್ಲವೂ ಯಕ್ಷಗಾನ ಅಥವಾ ಬಯಲಾಟದ ಮಟ್ಟದಲ್ಲಿ ರಚಿತವಾಗಿರುತ್ತವೆ. ಹಾಡುವಾಗ ಕನ್ನಡ ಹಾಡುಗಳ ಜೊತೆಗೆ ಮಧ್ಯ ಮಧ್ಯ ಮರಾಠಿ ಹಾಗೂ ತೆಲುಗು ಹಾಡುಗಳನ್ನು ಸೇರಿಸುತ್ತಾರೆ. ಆದರೆ ಸಂಭಾಷಣೆ ಮಾತ್ರ ಸಂಪೂರ್ಣವಾಗಿ ಕನ್ನಡದಲ್ಲಿ ನಡೆಸುತ್ತಾರೆ. ಪ್ರೇಕ್ಷಕನ ಮನಃಸ್ಥಿತಿ ಅರಿತುಕೊಂಡು ಅಲ್ಲಲ್ಲಿ ಹಾಸ್ಯ ಪಾತ್ರಗಳನ್ನು ತರುತ್ತಾರೆ. ಅಲ್ಲದೇ ಭಕ್ತಿ–ಭಾವದ ಸಂದರ್ಭಗಳಲ್ಲಿ ಅನೇಕ ಶಿವಶರಣರ, ವಚನಕಾರರ, ಧಾರ್ಮಿಕ ಹಾಗೂ ಪುರಾಣ ಪುರುಷರ ವ್ಯಕ್ತಿತ್ವಕ್ಕೆ ತಕ್ಕಂತೆ ಹಾಡುಗಳನ್ನು ರಚಿಸಿ ಹಾಡುತ್ತಾರೆ. ವಾದ್ಯಗಳ ಬಳಕೆ ಇಲ್ಲಿ ಬಳಸುವ ವಾದ್ಯಗಳು ವಿಶೇಷವಾಗಿವೆ. ಹಿಮ್ಮೇಳವೂ ಈ ಕಲೆಯ ಮತ್ತೊಂದು ವಿಶೇಷತೆ ಆಗಿರುತ್ತದೆ. ಒಂದೇ ಕುಟುಂಬದವರು ಸೇರಿ ಈ ಆಟವನ್ನು ಆಡಿಸುವುದರಿಂದ ಹೆಂಗಸರು ಗಂಡಸರು ಸೇರಿ ಹಾಡುತ್ತಾರೆ. ಅಲ್ಲದೆ ಈ ಸಂದರ್ಭದಲ್ಲಿ ಮೃದಂಗ, ಮುಖವೀಣೆ, ಮುಖ್ನ ಬುರಿಬುರಿ, ತಬಲ, ಹಾರ್ಮೋನಿಯಂ, ಮೃದಂಗತಾಳ ಮೊದಲಾದವುಗಳನ್ನು ಬಳಸುತ್ತಾರೆ. 'ಪಾದರೆ' ಎನ್ನುವ ವಾದ್ಯವನ್ನು ವಿಶೇಷವಾಗಿ ಬಳಸುತ್ತಾರೆ. ಹಿಮ್ಮೇಳ ಬಹುತೇಕ ಬಯಲಾಟದ ಮಾದರಿಯಲ್ಲೇ ಇರುತ್ತದೆ. ಮಹಿಳೆಯರ ಧ್ವನಿಗಳೂ ಕೂಡಿ ಕಥೆಗೆ ಹೆಚ್ಚು ಇಂಪನ್ನು ತರುತ್ತವೆ.

ISSN : 3048-7137

## ರಂಗಭೂಮಿ

ಹಳ್ಳಿಯ ಜನರ ಮನರಂಜನೆಯ ಮುಖ್ಯ ಕಾರ್ಯಕ್ರಮವಾಗಿರುವ ತೊಗಲು ಗೊಂಬೆಯಾಟವು ಸುಗ್ಗಿಯ ಕಾಲದಲ್ಲಿ ಏರ್ಪಡಿಸುವ ಅಥವಾ ದುಡಿಮೆಯ ನಂತರ ಫಸಲನ್ನು ಮನೆಯಲ್ಲಿ ತುಂಬಿಕೊಂಡ ಮೇಲೆ ಮನರಂಜನೆಗಾಗಿ ಇಂತಹ ಆಟವನ್ನು ಆಡಿಸುತ್ತಾರೆ. ಕಲಾವಿದರು ಮೊದಲಿಗೆ ಊರ ಮುಖಂಡರನ್ನು ಭೇಟಿಯಾಗಿ ತಮ್ಮ ಕಲೆ ಪ್ರದರ್ಶನ ಮಾಡುವಂತೆ ಕೇಳಿಕೊಳ್ಳುತ್ತಾರೆ. ಆಗ ಸುಲಭವಾಗಿ ಅನುಮತಿ ಸಿಗುತ್ತದೆ. ಮತ್ತು ಇಡೀ ರಾತ್ರಿ ದೀಪಕ್ಕೆ ಬೇಕಾದ ಎಣ್ಣೆಯ ಖರ್ಚನ್ನು ಮುಖಂಡರೆ ಕೊಡುತ್ತಾರೆ. ಜೊತೆಗೆ ಅವರ ಜೀವನೋಪಾಯಕ್ಕೆ ಒಂದಿಷ್ಟು ದವಸ ಧಾನ್ಯಗಳ ಕಾಣಿಕೆಯನ್ನು ಕೊಡುತ್ತಾರೆ. ಗೊಂಬೆ ಆಟದವರು ಅಲೆಮಾರಿಗಳಾಗಿದ್ದು ಕೆಲವರು ತಮ್ಮ ಪ್ರದೇಶದಲ್ಲಿ ಆಟವನ್ನು ಮುಗಿಸಿ ಮುಂದಿನ ಹಳ್ಳಿಗಳಿಗೆ ತೆರಳುತ್ತಾರೆ.

ಊರಿನ ಮಧ್ಯಭಾಗದಲ್ಲಿ ಅಥವಾ ಹೆಚ್ಚು ಜನ ಸೇರುವ ಸ್ಥಳದಲ್ಲಿ ಇವರು ವಿಶಾಲವಾದ ಜಾಗವನ್ನು ನೋಡಿ ಆಟ ಏರ್ಪಡಿಸುತ್ತಾರೆ. ಇದೊಂದು ಸಂಚಾರಿ ಕಲೆ ಆಗಿರುವುದರಿಂದ ಸುಲಭವಾಗಿರುವುದು ಒಂದೆಡೆಯಿಂದ ಇನ್ನೊಂದೆಡೆಗೆ ಕೊಂಡೊಯ್ಯುವುದು ಕಂಡುಬರುತ್ತದೆ. ರಂಗಮಂದಿರ ನಿರ್ಮಾಣಕ್ಕಾಗಿ, ನೆಡುವುದಕ್ಕಾಗಿ ನಾಲ್ಕು ಬಿದಿರುಗಳು, ಮೇಲ್ಭಾಗದಲ್ಲಿ ಕಟ್ಟುವುದಕ್ಕೆ ನಾಲ್ಕು ಬಿದಿರುಗಳು, ಮೇಲ್ಭಾಗ ಮತ್ತು ಗೊಂಬೆಗಳನ್ನು ತೋರಿಸುವ ಜಾಗವನ್ನು ಉಳಿದ ಮೂರು ಕಡೆಗಳಲ್ಲಿ ಮರೆಮಾಡಲು ಬೇಕಾದಷ್ಟು ಚಾಪೆ, ತಡಿಕೆ, ಗೊಂಬೆಗಳ ಪ್ರದರ್ಶನದ ಭಾಗಕ್ಕೆ ಬೇಕಾಗುವ ಬಿಳಿಯ ಪಂಚೆ, ಕರಿಯ ಕಂಬಳಿ ಇವಿಷ್ಟು ಇದ್ದರೆ ತೊಗಲುಗೊಂಬೆಯ ಆಟ ಸಿದ್ಧವಾಗುತ್ತದೆ. ಜೊತೆಗೆ ಶುಭ ಸಂಕೇತವಾಗಿ ಮಾವಿನ ಸೊಪ್ಪನ್ನು ಕೂಡ ಕಟ್ಟುತ್ತಾರೆ. ಅಲ್ಲದೆ ಒಂದೆರಡು ಬೇಕಾದಂತಹ ಚಾಪೆ ಅಥವಾ ಪಾಟುಗಳು ಅಲ್ಲಲ್ಲೇ ಪಡೆದುಕೊಂಡು ಆಟ ಮುಗಿದ ನಂತರ ಮರಳಿ ಕೊಡುತ್ತಾರೆ. ಹೀಗೆ ಕುಳಿತುಕೊಂಡು ಕುಣಿಸುವ ಚಿಕ್ಕದಾದ ತೊಗಲು ಗೊಂಬೆಗಳ ರಂಗಮಂದಿರ ಸಾಮಾನ್ಯ ಎತ್ತರ 8 ಅಡಿಯಷ್ಟು ಚೌಕಾಕಾರವಾಗಿ ಇರುತ್ತದೆ. ರಂಗದ ಮುಂಭಾಗದಲ್ಲಿ ಕೆಳಗಡೆ ಎರಡುವರೆ ಅಡಿಯಷ್ಟು ಕರಿಯ ಕಂಬಳಿಯನ್ನು ಕಟ್ಟುತ್ತಾರೆ. ಮೇಲ್ಭಾಗದಲ್ಲಿ ಇನ್ನುಳಿದ ಜಾಗಕ್ಕೆ ಅಪ್ಪಟ ಬಿಳಿಯ ಬಣ್ಣದ ಪಂಚೆಯನ್ನು ಕಟ್ಟುತ್ತಾರೆ. ಹೀಗೆ ಗೊಂಬೆಗಳನ್ನು ಪ್ರದರ್ಶನ ಮಾಡುತ್ತಾರೆ. ಗೊಂಬೆಗಳನ್ನು ಆಡಿಸುವ ವ್ಯಕ್ತಿ ಒಳಭಾಗದಲ್ಲಿ ಕುಳಿತಿದ್ದು ಕರಿಯ ಕಂಬಳಿಯಿಂದಾಗಿ ಅವರು ಪ್ರೇಕ್ಷಕರ ಕಣ್ಣಿಗೆ ಕಾಣುವುದಿಲ್ಲ. ಒಳಗಡೆ ಹಾಗೂ

ಅದರ ಹಿಂಭಾಗದಲ್ಲಿ ಒಂದು ದೀಪವನ್ನು ತೂಗು ಬಿಟ್ಟಿರುತ್ತಾರೆ. ಇತ್ತೀಚೆಗೆ ಗ್ಯಾಸ್ ಲೈಟ್ ಅಥವಾ ವಿದ್ಯುತ್ ಲೈಟಿನ ಬಳಕೆಯನ್ನು ಮಾಡುತ್ತಾರೆ. ಅದರ ಬೆಳಕು ತೊಗಲು ಗೊಂಬೆಗಳ ಮೇಲೆ ಬಿದ್ದು ಆ ಗೊಂಬೆಗಳ ಪ್ರತಿಫಲನ ಪಂಚೆಯ ಮೇಲೆ ಅದ್ಭುತವಾಗಿ ಕಾಣಿಸುತ್ತದೆ. ಈ ರೀತಿ ರಂಗಮಂದಿರ ಚಿಕ್ಕ ಗೊಂಬೆಗಳಿಗೆ ಮಾತ್ರ ಸಾಧ್ಯವಾಗುತ್ತಿದ್ದು, ಆಳೆತ್ತರದ ಗೊಂಬೆಗಳ ರಂಗಮಂದಿರದ ರಚನೆ ಕೂಡ ಬೇರೆಯಾಗಿರುತ್ತದೆ. ಇದು ಬಯಲಾಟದ ರಂಗಮಂದಿರದಷ್ಟೇ ಹೆಚ್ಚು ಕಡಿಮೆ ಹೋಲುತ್ತದೆ. ಆಳೆತ್ತರದ ಗೊಂಬೆಗಳನ್ನು ಕುಣಿಸುವಾಗ ಕಲಾವಿದ ಗೊಂಬೆಗಳ ಮರೆಯಲ್ಲಿ ನಿಂತುಕೊಂಡು ಗೊಂಬೆಯನ್ನು ಆಡಿಸುತ್ತಾನೆ. ಪಾತ್ರವನ್ನು ಕುಣಿಸುವಾಗ ಜೊತೆಯಲ್ಲಿ ತಾನು ಕುಣಿಯುತ್ತಾನೆ. ಬಯಲಾಟದ ಪಾತ್ರಗಳಂತೆ ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡಿರುತ್ತಾನೆ. ಕೆಳಭಾಗದ ಹಲಗೆಗಳನ್ನು ಹಾಕಿ ಕಟ್ಟೆಯನ್ನು ನಿರ್ಮಿಸುವುದು ರೂಡಿ. ಇದೆಲ್ಲ ಆದ ಬಳಿಕ ಆಡಿಸುವ ಭಾಗ ಒಂದನ್ನು ಬಿಟ್ಟು ಉಳಿದ ಮೂರು ಕಡೆ ಸೋಗೆಯ ಗರಿಯಿಂದಲೂ, ಚಾಪೆ ಅಥವಾ ತಡಿಕೆಯಿಂದಲೂ ಮರೆ ಮಾಡುತ್ತಾರೆ. ಮುಂಭಾಗವು ನೀಲಿಯ ಪಂಚೆಯಿಂದ ಮುಚ್ಚಿರುತ್ತಾರೆ. ಉಳಿದೆಲ್ಲಾ ತಂತ್ರವು ಕುಳಿತುಕೊಂಡು ಆಡಿಸುವ ರಂಗಮಂದಿರದಂತೆಯೇ ಇರುತ್ತದೆ.

## ವೇದಿಕೆ

"ನಾಲ್ಕು ಅಡಿ ಉದ್ದ, ನಾಲ್ಕು ಅಡಿ ಅಗಲ, ನಾಲ್ಕು ಅಡಿ ಎತ್ತರದ ಬಿದಿರಿನ ಬೊಂಬಿನ ಮಂಟಪ ರಚಿಸಿ ಮುಂಭಾಗಕ್ಕೆ ಬಿಳಿ ಬಟ್ಟೆ ಕಟ್ಟಿ ಪರದೆಯ ಹಿಂದೆ ಕುಳಿತ ಈ ಐದಾರು ಜನ ಗೊಂಬೆ ಆಡಿಸುವವರು ಯಾರಿಗೂ ಗೋಚರಿಸು ವುದಿಲ್ಲ. ಉಳಿದಂತೆ ತಾಳ, ಹಾರ್ಮೋನಿಯಂ, ತಬಲ, ಮೃದಂಗ ವಾದ್ಯ ನುಡಿಸುವವರು ಜೊತೆಗೆ ಇರುತ್ತಾರೆ. ಹಿಂದೆ ಕಂಚಿನ ತಟ್ಟೆಯ ಮಧ್ಯಕ್ಕೆ ಜೇನು ಮೇಣ ಅಂಟಿಸಿ ಅದಕ್ಕೆ ಒಂದು ದಪ್ಪ ಹಂಚಿ ಕಡ್ಡಿಯನ್ನು ನೆಟ್ಟಗೆ ನಿಲ್ಲಿಸಿ ಮೇಲಕ್ಕೂ ಕೆಳಕ್ಕೂ ಬೆರಳಿನಿಂದ ಹಿಡಿದಾಗ ಶೃತಿ ಹೊಮ್ಮುತ್ತದೆ. ಇತ್ತೀಚಿಗೆ ಅದರ ಬದಲಿಗೆ ಹಾರ್ಮೋನಿಯಂ ಉಪಯೋಗಿಸುತ್ತಾರೆ. ಪುಂಗಿ, ತಾಳ, ತುತ್ತೂರಿಯನ್ನು ಉಪಯೋಗಿಸುತ್ತಾರೆ. ಅಡಿಸುವ ಗೊಂಬೆಗೆ ಮೂರು ಸೂತ್ರದ ಕಡ್ಡಿಗಳನ್ನು ಅಳವಡಿಸಿದ್ದು ಇವನ್ನು ಬೆರಳಿಗೆ ಸಿಕ್ಕಿಸಿಕೊಂಡು ಚಮತ್ಕಾರದಿಂದ ಕುಣಿಸುತ್ತಾರೆ. (ಜಾನಪದ ಶ್ರೀ ಜನಪ್ರಿಯ ಪುಟ 392) ಪರದೆಯ ಹಿಂದೆ ಹೊಂಗೆ ಎಣ್ಣೆಯ ದೀಪ ಉರಿಸುತ್ತಿದ್ದರು. ಈಗ ವಿದ್ಯುಚ್ಛಕ್ತಿ ಬಳಕೆಯಲ್ಲಿದೆ. ಕಥೆಗೆ ಬೇಕಾದಂತಹ ಬೊಂಬೆಗಳನ್ನು ಇಟ್ಟುಕೊಂಡು ಆಡಿಸುತ್ತಾರೆ. ಬೊಂಬೆಗಳು ಬಲಗಡೆಯಿಂದ

ISSN : 3048-7137

ಬಂದು ಎಡಗಡೆಗೆ ಹೋಗುತ್ತಿರುತ್ತವೆ. ಹೀಗೆ ಗಣಪತಿ, ಸರಸ್ವತಿ ಪ್ರಾರ್ಥನೆಯಿಂದ ಆರಂಭವಾಗಿ ಆ ನಂತರ ಗ್ರಾಮ್ಯ ಸಂಭಾಷಣೆಯಲ್ಲಿ ಮುಂದುವರಿಯುತ್ತದೆ. ಮಧ್ಯದಲ್ಲಿ ಹಾಸ್ಯ ಪಾತ್ರಗಳನ್ನು ತರುತ್ತಾರೆ. ಕಟವ ಎಂದು ಕರೆಯುವ ವಿದೂಷಕ ಪಾತ್ರದಿಂದ ಮನರಂಜನೆ ಸಿಗುತ್ತದೆ. ಬೆಳ್ಳಿ ಪರದೆ ಮೇಲೆ ಬೀಳುವ ನೆರಳಿನ ಚಲನೆ ನೋಡುಗರಿಗೆ ಹೆಚ್ಚು ಮನರಂಜನೆಯನ್ನು ಕೊಡುತ್ತದೆ.

## ಪ್ರಾದೇಶಿಕ ಭೇದ

ಕರ್ನಾಟಕದ ತೊಗಲುಗೊಂಬೆ ಆಟದಲ್ಲಿ ಪ್ರಮುಖವಾಗಿ ಮೂರು ಪ್ರಾದೇಶಿಕ ಭೇಧಗಳನ್ನು ಗುರುತಿಸಬಹುದು. ಒಂದು ಬಡಗಲಪಾಯ ಅಥವಾ ಉತ್ತರ ಕರ್ನಾಟಕ, ಎರಡು ತೆಂಕಲಪಾಯ ಹಳೆಯ ಮೈಸೂರು ಭಾಗ, ಮೂರು ಮೂಡಲಪಾಯ ಕರ್ನಾಟಕ ಹಾಗೂ ಆಂಧ್ರಗಳ ಗಡಿಭಾಗ. ಬಿಜಾಪುರ, ಬೆಳಗಾಂ ಭಾಗಗಳಲ್ಲಿ ಡೋಲು ಬಾರಿಸುವನು ರಂಗದ ಹೊರಗೆ ಜನರ ಮಧ್ಯೆ ಉಳಿಯುತ್ತಾನೆ. ಗೊಂಬೆಗಳನ್ನು ಕುಣಿಸುವವನು ಮಾತ್ರ ಒಳಗಡೆ ಸೇರಿಕೊಳ್ಳುತ್ತಾನೆ. ಇಲ್ಲಿಯ ಗೊಂಬೆಗಳಲ್ಲಿ ಮಹಮದೀಯರ ಪ್ರಭಾವ ಎದ್ದು ತೋರುತ್ತದೆ. ಸವಾರರು ಒಂಟೆಗಳ ಮೇಲೆ, ಕುದುರೆಗಳ ಮೇಲೆ, ಆನೆಗಳ ಮೇಲೆ ವಿಶೇಷವಾಗಿ ಕಾಣಿಸಿಕೊಳ್ಳುತ್ತಾರೆ. ಗೊಂಬೆಗಳೆಲ್ಲ ಮಟ್ಟಸವಾದ ಆಕಾರದಲ್ಲಿ ಎರಡು ಅಡಿ ಅಂತರದಲ್ಲಿ ಇರುತ್ತವೆ. ಹಳೆಯ ಮೈಸೂರು ಭಾಗದಲ್ಲಿ ಕಲಾವಿದರೆಲ್ಲ ರಂಗದ ಒಳಗೆ ಸೇರಿಕೊಳ್ಳುತ್ತಾರೆ. ಗೊಂಬೆಗಳು ಸಾಕಷ್ಟು ದೊಡ್ಡದಾಗಿದ್ದು ಮಧ್ಯಮ ಆಕೃತಿಯನ್ನು ಹೊಂದಿರುತ್ತವೆ. ಬಡಗಲಪಾಯ, ತೆಂಕಲಪಾಯ ಎರಡರಲ್ಲೂ ಗೊಂಬೆಗಳನ್ನು ಕುಳಿತು ಕುಣಿಸಲಾಗುತ್ತದೆ. ಅದಕ್ಕೆ ತಕ್ಕಂತೆ ತಕ್ಕ ರಂಗಮಂದಿರವನ್ನು ಚಾಪೆಗಳಿಂದ, ತಡಿಕೆಗಳಿಂದ ನಿರ್ಮಿಸಿ ಕೊಳ್ಳುತ್ತಾರೆ. ರಂಗಮಂಚದ ಮುಂಭಾಗದಲ್ಲಿ ಮಾತ್ರ ಕೆಳಭಾಗಕ್ಕೆ ಎರಡುವರೆ ಅಡಿಯಷ್ಟು ಎತ್ತರಕ್ಕೆ ಕರಿಯ ಕಂಬವನ್ನು, ಮೇಲ್ಭಾಗಕ್ಕೆ ತೆಳುವಾದ ಬಿಳಿಯ ಪಂಜೆಯನ್ನು ಜಾಲಿಯ ಮುಳ್ಳುಗಳ ನೆರವಿನಿಂದ ಭದ್ರವಾಗಿ ಸಿಕ್ಕಿಸಿರುತ್ತಾರೆ. ಗೊಂಬೆಗಳನ್ನು ಕುಣಿಸುವಾತ ಕಂಬಳಿಯ ಭಾಗದಲ್ಲಿ ಮರೆಯಾಗುವುದರಿಂದ ಪ್ರೇಕ್ಷಕರಿಗೆ ಗೋಚರಿಸುವುದಿಲ್ಲ. ಬಿಳಿಯ ಪರದೆಯ ಭಾಗದಲ್ಲಿ ಗೊಂಬೆಗಳ ಪ್ರದರ್ಶನ ಸಾಗುತ್ತದೆ. ರಂಗದ ಒಳಗೆ ಕುಣಿಸುವವರ ಹಿಂಬದಿಯಲ್ಲಿ ಒಂದು ಪಕ್ಕಕ್ಕೆ ಅಂಗೈ ಅಗಲದ ದೀಪವನ್ನು ಹಾಕಿರುತ್ತಾರೆ. ಅದರ ಮಂದಬೆಳಕು ಪಂಚೆಯ ಮೇಲೆ ಬಿದ್ದು ಅವುಗಳ ಪ್ರತಿಬಿಂಬ ಹೊರಗೆ ಕುಳಿತ ಪ್ರೇಕ್ಷಕರಿಗೆ ಆಕರ್ಷಕವಾಗಿ ತೋರುತ್ತದೆ. ಹಾಗೆಯೇ ನೋಡಿದಾಗ ಮಸುಕು ಮಸಕಾಗಿ

ತೋರುವ ಈ ಗೊಂಬೆಗಳು ದೀಪದ ಬೆಳಕಿನಲ್ಲಿ ಉಜ್ವಲವಾಗಿ ತೋರುತ್ತವೆ. ಮೂಡಲಪಾಯದಲ್ಲಿ ಬಯಲಾಟದಂತೆ ದೊಡ್ಡದಾದ ರಂಗಮಂದಿರ ಸಿದ್ಧಗೊಳ್ಳುತ್ತದೆ. ಏಕೆಂದರೆ ದೊಡ್ಡ ಗೊಂಬೆಗಳನ್ನು ಕುಣಿಸುವುದರಿಂದ ಇದು ಅನಿವಾರ್ಯ ಆಗಿದ್ದು ಕೆಲವು ವೇಳೆ ಮಾನವನ ಆಕೃತಿಯಂತೆ ದೊಡ್ಡದಾದ ಗೊಂಬೆಗಳನ್ನು ಬಳಸುತ್ತಾರೆ. ಹಾಗಾಗಿ ಕಲಾವಿದ ಕಾಲಿಗೆ ಗೆಜ್ಜೆ ಕಟ್ಟಿ ತಾನು ಹೆಜ್ಜೆ ಹಾಕಬೇಕಾಗುತ್ತದೆ. ಕೆಳಗೆ ಹಲಗೆಗಳನ್ನು ಅಳವಡಿಸಬೇಕಾಗುತ್ತದೆ. ಬಯಲಾಟದ ರಂಗಮಂದಿರದಂತೆ ನಿರ್ಮಾಣ ಆಗುವ ಈ ಆಟ ಊರ ಮುಖಂಡರ ರುಮಾಲುಗಳನ್ನು ತಂದು ಜಾಲಿಗಳನ್ನು ಚುಚ್ಚಿ ಪರದೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

ಮೂಡಲಪಾಯ, ತೆಂಕಲಪಾಯಗಳಲ್ಲಿ ಕುಳಿತು ಸೂತ್ರದ ತೊಗಲುಗೊಂಬೆಗಳನ್ನು ಕುಣಿಸುವವರು ಅನೇಕ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ಈ ಕಾರ್ಯವನ್ನು ಮಾಡುತ್ತಾನೆ. ಹಿರಿಯ ಕಲಾವಿದನ ಹೆಂಡತಿ ಗೊಂಬೆಗಳನ್ನು ಒದಗಿಸುವುದು, ದೀಪಕ್ಕೆ ಎಣ್ಣೆ ಹಾಕುವುದು ಮಾಡುತ್ತಾಳೆ. ಕಂಚಿನ ಗಂಗಾಳ ಒಂದನ್ನು ನೆಲದ ಮೇಲೆ ಬೋರಲಾಗಿ ಹಾಕಿ ಮಧ್ಯದಲ್ಲಿ ಮೇಣವನ್ನು ಅಂಟಿಸಿ ಅದರ ಮೇಲೆ ಒಂದು ಹಂಚಿಕಡ್ಡಿಯನ್ನು ನಿಲ್ಲಿಸಿ ಉಜ್ಜುವುದರಿಂದ ಒಂದು ಬಗೆಯ ನಾದ ಬರುತ್ತದೆ. ಸೊಸೆ ಈ ವಾದ್ಯದ ಹೊಣೆಯನ್ನು ಹೋರುತ್ತಾಳೆ. ಮಗ ಮೃದಂಗವನ್ನು ನುಡಿಸುತ್ತಾನೆ. ಮುಖ ವೀಣೆಯನ್ನು ಬಳಸುತ್ತಾರೆ. ಕೆಲವೊಮ್ಮೆ ಬೇರೆ ವಾದ್ಯಗಳನ್ನು ಬಳಸುತ್ತಾರೆ. ನೃತ್ಯದ ವೈಖರಿ, ಯುದ್ಧದ ಸನ್ನಿವೇಶ, ಬಾಣಗಳ ಪ್ರಯೋಗ, ಹಾಡುಗಾರಿಕೆ, ಹಿಮ್ಮೇಳನದ ವ್ಯವಸ್ಥೆ ಅದ್ಭುತವಾಗಿ ಇರುತ್ತದೆ. ಸಾಲು ಸಾಲಾಗಿ ಬರುವ ಸೈನಿಕರು ಅಂತರಿಕ್ಷ ಭೂಮಿಗಳ ಅಂತರವನ್ನು ತೋರುವ ವ್ಯವಸ್ಥೆ ಇದಕ್ಕೆ ಪ್ರೇಕ್ಷಕ ಬೆರಗಾಗುತ್ತಾನೆ. ಕೇವಲ ಸ್ತಬ್ದ ಚಿತ್ರಗಳಲ್ಲಿ ಈ ಕಲಾವಿದ ಮೆರೆಯುತ್ತಾನೆ. ಮೂಡಲಪಾಯದಲ್ಲಿ ನಿಂತು ಕುಣಿಸುವ ಅಗತ್ಯ ಇರುವುದರಿಂದ ಗೊಂಬೆಗಳ ಪ್ರಮಾಣವೂ ದೊಡ್ಡದಾಗಿರುವುದರಿಂದ ಇಲ್ಲಿ ಪಾತ್ರಗಳನ್ನು ಹಂಚಿಕೊಂಡು ನಿರ್ವಹಣೆ ಮಾಡುತ್ತಾರೆ.

ತೆಂಕಲಪಾಯ, ಬಡಗಲಪಾಯದ ಗೊಂಬೆಗಳನ್ನು ಜಿಂಕೆ ಚರ್ಮದಿಂದ ಮಾಡಿದರೆ ಕೆಲವೊಮ್ಮೆ ಮೇಕೆ ಚರ್ಮ ಬಳಕೆ ಆಗುತ್ತದೆ. ಆದರೆ ಮೂಡಲಪಾಯದಲ್ಲಿ ಎಮ್ಮೆಯ ಚರ್ಮವನ್ನೇ ಬಳಸುತ್ತಾರೆ. ಚರ್ಮವನ್ನು ಹದ ಮಾಡಿಕೊಂಡು ಬೇಕಾದ ಅಳತೆಗೆ ಕತ್ತರಿಸಿಕೊಂಡು ಮೂಲ ವರ್ಣಗಳಾದ ಕೆಂಪು, ಹಳದಿ, ಕಪ್ಪು ಬಣ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸುತ್ತಾರೆ. ಅಭರಣಗಳನ್ನು ವಿಶೇಷತೆಯಿಂದ ಮಿಂಚುವಂತೆ ಮಾಡುತ್ತಾರೆ. ದಬ್ಬಳದ

ISSN : 3048-7137

ಸಹಾಯದಿಂದ ಚುಚ್ಚಿದ ಕಲಾತ್ಮಕ ರಂಧ್ರಗಳು ದೀಪದ ಬೆಳಕಿನಲ್ಲಿ ಆ ಭಾಗದ ಮಣಿಸರದಂತೆ ಗೋಚರಿಸುತ್ತವೆ. ಇತರ ಯಕ್ಷಗಾನಗಳಲ್ಲಿ ಇರುವಂತೆ ತೊಗಲು ಗೊಂಬೆ ಆಟದಲ್ಲಿ ನಾಟಕ ಸಾಹಿತ್ಯ ರಾಮಾಯಣ, ಮಹಾಭಾರತ ಮೊದಲಾದ ವಿಷಯದ ಜೊತೆಗೆ ಇಂದ್ರಜಿತು ಸಂವಾದ, ತ್ರಿಪುರ ಸಂಹಾರ, ಸುಂದರಕಾಂಡ, ಜಲಂಧರನ ಕಥೆ, ಮೈ ರಾವಣ ಕಾಳಗ ಮೊದಲಾದವು ಪ್ರಸಿದ್ಧಿಯನ್ನು ಪಡೆದಿವೆ.

## ಉಪಸಂಹಾರ

ಹೊಸ ಹೊಸ ಆಲೋಚನೆಗಳ ಹಿನ್ನೆಲೆಯಲ್ಲಿ ಪುರಾತನವಾದ ತೊಗಲು ಗೊಂಬೆ ಕಲಾ ಮಾಧ್ಯಮಕ್ಕೆ ಹೊಸ ಕಾಯಕಲ್ಪ ಕೊಡಬೇಕಾಗಿದೆ. ಮಾಧ್ಯಮದವರು, ರಂಗಾಸಕ್ತರು, ಚಿಂತಕರು, ಕಲಾವಿದರು ಸರ್ಕಾರದ ವಿವಿಧ ಇಲಾಖೆಗಳು ಸಾಕಷ್ಟು ಜವಾಬ್ದಾರಿ ವಹಿಸಬೇಕು. ಹೊಸ ಹೊಸ ಪ್ರಯೋಗಗಳು ನಡೆಯಬೇಕು. ಸರ್ಕಾರ ಕಲಾ ಕೇಂದ್ರಗಳನ್ನು ತೆರೆದು ಯೋಜನೆ ಸಂರಕ್ಷಣೆ ಬಗ್ಗೆ ಕೆಳಹಂತದಿಂದಲೇ ಗುರುತಿಸಬೇಕು. ಸರಿಯಾಗಿ ಯೋಚಿಸಬೇಕು. ನಮ್ಮ ಜನಪದ ಕಲೆಗಳಿಂದ ದೇಶಪ್ರೇಮ, ರಾಷ್ಟ್ರೀಯತೆ, ಜಾತ್ಯತೀತ ಮೌಲ್ಯಗಳು ಅಧುನಿಕ ಭಾರತದ ವಿಕಾಸದ ಪ್ರಗತಿಯ ಹೆಜ್ಜೆಗಳು ಎಂಬುದನ್ನು ಅರಿತು ವ್ಯಾಪಾರೀಕರಣ ನೀತಿ ಬಿಟ್ಟು ಕಲಾವಿದರ ಕಿತ್ತು ತಿನ್ನುವ ಬಡತನ, ಹಸಿವು, ಘರ್ಷಣೆಗಳನ್ನು ದೂರಮಾಡಿ ಆರ್ಥಿಕ ಅನುಕೂಲ ಮಾಡುವ ಮೂಲಕ ವಂಚಿಸುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ತೊಳೆದು ಹಾಕಬೇಕು. ಪ್ರಜಾ ಪ್ರತಿನಿಧಿಗಳು ಇಂತಹ ವ್ಯವಸ್ಥೆಯನ್ನು ಗಮನಿಸಿ ಗೌರವಿಸಬೇಕು. ಇವರ ಅನೇಕ ಜ್ವಲಂತ ಸಮಸ್ಯೆಗಳನ್ನು ಕೇಳಿ ಮುಳುಗುತ್ತಿರುವ ಇವರ ಬದುಕನ್ನು ಕಲಾವಿದರನ್ನು ಗುರುತಿಸಿ ಗೌರವಿಸಿ ಪ್ರೋತ್ಸಾಹಿಸಬೇಕು.

ಚರ್ಮ ನಮ್ಮ ಸಮಾಜದ ಅಸ್ಪೃಶ್ಯತೆಯ ವಸ್ತುವೆಂದು ಅದರ ಸಂಬಂಧಿತ ಎಲ್ಲಾ ಕಲೆಗಳು ಅಸ್ಪೃಶ್ಯವೆಂದು ಭಾವಿಸುತ್ತಿರುವ ನಮ್ಮ ಸಮಾಜದಲ್ಲಿ ಇಂತಹ ಕಲೆಗಳು ಉಳಿಯಬೇಕಾದರೆ ಆ ಮನೆಯ ಕುಟುಂಬದ ಎಲ್ಲರೂ ಸರ್ಕಾರಿ ಸೇವೆಗೆ ಹೋಗದೆ ತಮ್ಮ ಸಂಪ್ರದಾಯದ ಕಲೆಯ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಅರ್ಥ ಮಾಡಿಕೊಂಡು ರಕ್ಷಿಸಬೇಕಾಗಿದೆ. ಇಂತಹ ಅಸ್ಪೃಶ್ಯ ಜನಪದ ಕಲೆಗಳನ್ನು ಕಲಾವಿದನ ಮನೆಯವರೆಲ್ಲರೂ ಕಲಿಯಿದೆ ಹೋದರೆ ದೊಡ್ಡ ದುರಂತವೇ ಆಗುತ್ತದೆ. ಅದಕ್ಕೆ ಸೂಕ್ತ ಅವಕಾಶ ಕೊಡದ ನಮ್ಮೆಲ್ಲರ ಅನಾದರ ಒಂದು ಕಡೆ ಆದರೆ, ಕಲೆಗಳಿಗೆ ಆಧುನಿಕತೆಯ ಸಂಘರ್ಷಗಳು ಎದುರಾಗಿ ವೃತ್ತಿಯಾಗಿ ಉಳಿಸಿಕೊಳ್ಳದೆ ಹವ್ಯಾಸವಾಗಿ ಬದಲಾಗುತ್ತಿದ್ದರೆ ಇಂತಹ ಹೊರಳು ದಾರಿಗಳಿಂದ

ತೊಗಲು ಗೊಂಬೆಗಳ ಕಲಾ ಪ್ರಪಂಚ ಮರೆಯಾಗುತ್ತದೆಯೇ ಎಂಬುದನ್ನು ಚಿಂತಿಸಬೇಕಾಗಿದೆ.

ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾಗಿರುವ ತೊಗಲು ಗೊಂಬೆ ಆಟ ಭಾರತವು ವಿಶ್ವಕ್ಕೆ ನೀಡಿದ ಅತ್ಯುನ್ನತ ಕಾಣಿಕೆ ಆಗಿದೆ. ಇಲ್ಲಿಂದ ಏಷ್ಯಾದ ನಾನಾ ಭಾಗಗಳಿಗೆ ಈ ಕಲೆ ವ್ಯಾಪಿಸಿದ್ದು ಥೈಲ್ಯಾಂಡ್, ಜಾವಾ ಮುಂತಾದ ಕಡೆ ಭಾರತದ ರೀತಿಯಲ್ಲಿಯೇ ನೇರವಾಗಿ ಅನುಸರಿಸಲಾಗುತ್ತಿದೆ. ಈ ಕಲೆ ಚೀನಾ ಹಾಗೂ ಬೇರೆ ಬೇರೆ ರಾಷ್ಟ್ರಗಳಿಗೂ ವ್ಯಾಪಿಸಿರುವುದರಿಂದ ತೊಗಲು ಗೊಂಬೆಯಾಟ ಐರೋಪ್ಯ ದೇಶಗಳಲ್ಲೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡ ನಿದರ್ಶನಗಳು ಇವೆ. ಆದರೆ ತೊಗಲು ಗೊಂಬೆ ಕರ್ನಾಟಕದಲ್ಲಿ ಕ್ರಮೇಣ ಕಣ್ಮರೆಯಾಗುತ್ತಿದ್ದು ಅನೇಕ ಕಡೆಗಳಲ್ಲಿ ಕಲಾವಿದರು ಗೊಂಬೆಗಳನ್ನು ನೀರಿಗೆ ಬಿಟ್ಟು ಜೀವನೋಪಾಯಕ್ಕೆ ಬೇರೆ ಮಾರ್ಗ ಹುಡುಕಿಕೊಳ್ಳುತ್ತಿದ್ದಾರೆ. ಕಲಾವಿದರ ಅಸಹಾಯಕ ಸ್ಥಿತಿಯ ಲಾಭವನ್ನು ಪಡೆದುಕೊಂಡು ಕೆಲವರು ಈ ಅಪೂರ್ವ ಕಲಾ ಕೃತಿಗಳನ್ನು ಅಪಾರ ಸಂಖ್ಯೆಯಲ್ಲಿ ಕಲೆಹಾಕಿ ಬಹಿರಂಗವಾಗಿಯೇ ಮಾರಾಟ ಮಾಡುತ್ತಿದ್ದಾರೆ. ಈ ಕಲೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದರೂ ನಮ್ಮ ಚಿತ್ರಕಲೆಯ ಶ್ರೇಷ್ಠ ಪರಂಪರೆಯನ್ನು ಪರಿಚಯಿಸುವ ತೊಗಲು ಗೊಂಬೆಗಳನ್ನಾದರೂ ನಾವು ಉಳಿಸಿಕೊಳ್ಳದ ಸೌಭಾಗ್ಯದಿಂದ ವಂಚಿತರಾಗಬಾರದು.

## ಆಕರ ಗ್ರಂಥಗಳು


1. ಚಂದ್ರಶೇಖರ ಕಂಬಾರ(ಸಂ), ಕರ್ನಾಟಕ ಜಾನಪದ ವಿಶ್ವಕೋಶ ಸಂಪುಟ– 1, 2, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
2. ಚನ್ನಬಸಪ್ಪ ಗೊ.ರು., ಕರ್ನಾಟಕದ ಜನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1977
3. ನಾಯಕ ಜಿ.ಬೆನಕನಹಳ್ಳಿ, ಕಿಳ್ಳೆಕ್ಯಾತರು, ಐ.ಬಿ.ಎಚ್., ಪ್ರಕಾಶನ, ಬೆಂಗಳೂರು, 1984
4. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜನಪದ ಕಲೆಗಳ ಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ
5. ಬೊಂಬೆರಾಮರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,
6. ಮರುಳಸಿದ್ಧಪ್ಪ ಕೆ. ಆಧುನಿಕ ಕನ್ನಡ ನಾಟಕ, ಅಂಕಿತ ಪುಸ್ತಕ ಬೆಂಗಳೂರು, 2013